ಜೈನ ವಾಸ್ತುಶಿಲ್ಪ ರಚನೆಯಲ್ಲಿ ನಾಗನ ಕೆತ್ತನೆಗೆ ಹೆಚ್ಚಿನ  ಪ್ರಾಶಸ್ತ್ಯವನ್ನು ನೀಡಲಾಗಿದೆ. ಮೂಡಬಿದಿರೆಯ ತ್ರಿಭುವನ ತಿಲಕ ಚೂಡಾಮಣಿ ಬಸದಿ, ಕಾರ್ಕಳ ಗೇರುಸೊಪ್ಪೆಗಳಲ್ಲಿರುವ ಚತುರ್ಮುಖ ಬಸದಿಗಳ ಅಧಿಷ್ಠಾನ, ಸ್ತಂಭಗಳ ಮೇಲೆ ನಾಗನ ಶಿಲ್ಪವನ್ನು ಕೆತ್ತಿದ್ದಾರೆ. ನಾಗಮಂಡಲವೆಂಬ ಆರಾಧನೆಯು ತುಳುನಾಡಿಗೆ ವಿಶಿಷ್ಟವಾದುದು.  ನಾಗಮಂಡಲವನ್ನು ಹೋಲುವ ಉಬ್ಬು ಕೆತ್ತನೆಗಳು ಬಸದಿಯ ಸ್ತಂಭಗಳ ಮೇಲೂ, ಮಾನಸ್ತಂಭದಲ್ಲೂ ಕಂಡುಬರುತ್ತವೆ. ನಾಗಮಂಡಲ, ಡಕ್ಕೆಬಲಿ ತುಳುನಾಡಿನಲ್ಲಿ ಮಾತ್ರ ಉಳಿದುಕೊಂಡು ಬಂದಿರುವ ಕಲಾತ್ಮಕ ಆರಾಧನೆಯಾಗಿದೆ.  ಇದರ ಮೇಲೆ ಜೈನ ಪ್ರಭಾವವನ್ನು ಗುರುತಿಸುವ ಪ್ರಯತ್ನಗಳು ನಡೆದಿವೆ.  ಇಂದು ಇದು ಬ್ರಾಹ್ಮಣ ಪುರೋಹಿತ, ಬ್ರಾಹ್ಮಣ ನಾಗಪಾತ್ರಿ, ಭ್ರಾಹ್ಮಣ ನರ್ತಕರ ಕೂಡುವಿಕೆಯಿಂದ ನಡೆಯುತ್ತಿದ್ದರೂ, ಇತರ ಜಾತಿಯವರು ನಾಗನಿಗೆ ರಕ್ತಬಲಿಯನ್ನು ಅರ್ಪಿಸುತ್ತಾರೆ.  ಡಕ್ಕೆಬಲಿಯೆಂಬ ಮಾತಿನಲ್ಲಿ ಪ್ರಾಣಿ ಬಲಿಯೂ ಸೇರಿದೆ.  ಇದರ ಆರಾಧಕರು ಜೈನ ಮತ್ತು ವೈದಿಕ ಧರ್ಮಗಳ ಪ್ರಭಾವದಿಂದ ಬಿಟ್ಟಿರಬಹುದೆಂದು ವಿದ್ವಾಂಸರು ವಾದಿಸುತ್ತಾರೆ.

ಡಕ್ಕೆಬಲಿ ನಾಗಮಂಡಲದಲ್ಲಿ ಬಿಡಿಸಲಾಗುವ ಕೈಕಾಲುಗಳಿಲ್ಲದ ತಲೆಯ ಚಿತ್ರವನ್ನು ಬ್ರಹ್ಮಯಕ್ಷನೆಂದು ಕರೆಯುವುದು ಕುತೂಹಲದ ವಿಚಾರವಾಗಿದೆ.  ನಾಗನ ಹೆಡೆಯನ್ನು ಹೋಲುವ ಆಕೃತಿ ಹಳದಿ, ಬಿಳಿ ಬಣ್ಣಗಳಲ್ಲಿ ರೇಖಿಸಲಾಗುತ್ತಿದೆ.  ಇದನ್ನು ಯಕ್ಷಿಯೆನ್ನುತ್ತಾರೆ ಈ ರಚನೆಗಳು ಯಕ್ಷಾರಾಧನೆಯನ್ನು ಕುರಿತು ಪಳೆಯುಳಿಕೆಗಳ ಸಂಕೇತವೆನ್ನಬಹುದು.  ಈ ಸಂದರ್ಭದಲ್ಲಿ ಡಾ II ಹೀರಾಲಾಲ್ ಜೈನ್ ಅವರು ನಾಗನ ಬಗ್ಗೆ ಹೇಳುವ ಮಾತನ್ನು ಉಲ್ಲೇಖಿಸಬಹುದು. "..ಯಕ್ಷ, ನಾಗದೇವ ದೇವತೆಯರ ಆರಾಧನೆಯು ಆರ್ಯಪೂರ್ವ ಯುಗದಲ್ಲಿ ರೂಢಿಯಲ್ಲಿತ್ತು.  ಜೈನ ಧರ್ಮವು ಅವುಗಳಲ್ಲಿರುವ ಹಿಂಸಾತ್ಮಕ ಪೂಜಾವಿಧಿಯನ್ನು ನಿಷೇಧಿಸಿ ಯಕ್ಷ, ನಾಗದೇವತೆಗಳ ಆರಾಧನೆಯನ್ನು ಸ್ವೀಕರಿಸಿತು" ಎನ್ನುತ್ತಾರೆ.  ಈ ಹಿನ್ನೆಲೆಯಲ್ಲಿ ಜೈನಮತವು ಯಕ್ಷಾರಾಧನೆಯ ಜೊತೆಗೆ, ನಾಗಾರಾಧನೆಯನ್ನೂ ಸಾರ್ವತ್ರಿಕವಾಗಿ ಆಚರಿಸುತ್ತ ಬಂದಿರುವುದರಿಂದ, ಬಹುಶಃ ತುಳುನಾಡಿನಲ್ಲಿ ಜೈನ ಪ್ರಾಬಲ್ಯವಿದ್ದಾಗ ನಾಗಮಂಡಲ ಮೇಲೇ ಜೈನ ಮತದ ಪ್ರಭಾವವು

ಉಂಟಾಗಿರಬೇಕು. ಭೂತಾರಾಧನೆಯನ್ನು ಪೂರ್ತಿಯಾಗಿ ಕೇವಲ ವ್ಯಾವಹಾರಿಕ ನೆಲೆಯಲ್ಲಿ ಮಾತ್ರ ಸ್ವೀಕರಿಸಿದ ಜೈನಧರ್ಮವು, ನಾಗಾರಾಧನೆಯನ್ನು ಪೂರ್ತಿಯಾಗಿ ಸ್ವೀಕರಿಸಿದೆ. ಜೈನ ಪುರೋಹಿತರ ಪ್ರವೇಶವು ಭೂತಾರಾಧನೆಯಲ್ಲಿ ಇದುವರೆಗೆ ನಡೆದಿಲ್ಲ ಆದರೆ ನಾಗನ ಪೂಜೆಯನ್ನು ಅವರು ನೆರವೇರಿಸುತ್ತಾರೆ. ಈ ಅಂಶವನ್ನು ನಾವು ವಿಶೇಷವಾಗಿ ಗಮನಿಸಬೇಕು.

ವಿದ್ಯಾದೇವಿಯನ್ನು ಸರಸ್ವತಿಯೆಂದು ಕರೆಯುತ್ತಾರೆ. ಶ್ರುತವೆಂದರೆ ಜಿನಾಗಮ ಅಥವಾ ಶಾಸ್ತ್ರವೆಂದರ್ಥ. ತೀರ್ಥಂಕರರ ಉಪದೇಶಗಳನ್ನು ಗಣಧರರು ದ್ವಾದಶಾಂಗದಲ್ಲಿ ಸಂಗ್ರಹಿಸಿದರು. ಈ ಹನ್ನೆರಡು ಆಗಮಗಳೇ ಶ್ರುತ. ಕಾಲಾಂತರದಲ್ಲಿ ಶ್ರುತದ ಅಧಿದೇವತೆ ಕಲ್ಪಿತವಾಗಿ ಶ್ರುತದೇವಿಯಾಗಿರಬೇಕು. ಎಂದು ವಿದ್ವಾಂಸರು ಊಹಿಸುತ್ತಾರೆ. ಆಕೆಯ ಸುಖಾಸೀನ ಭಂಗಿಯಲ್ಲಿ ಕುಳಿತಿದ್ದು, ಚತುರ್ಭುಜೆಯಾಗಿದ್ದಾಳೆ ಕೈಗಳಲ್ಲಿ ಜ್ಞಾನಮುದ್ರೆ, ಧ್ಯಾನಮುದ್ರೆ, ಅಕ್ಷಮಾಲೆ ಮತ್ತು ಪುಸ್ತಕಗಳಿರುತ್ತವೆ. "ಪರಮ ಜೀನೇಂದ್ರ ವಾಣಿಯೆ ಸರಸ್ವತಿ,ಬೇರದು ಪೆಣ್ಣರೂಪಂ ಧರಿಯಿಸಿನಿಂದುದಲ್ತು" ಎಂದು ಪಂಪನಂಥ ಕವಿಗಳು ಎಷ್ಟೇ ಬಲವಾಗಿ ಸಾರಿ ಹೇಳಿದರೂ ಶ್ರುತವನ್ನು ಸರಸ್ವತಿಯ ರೂಪದಲ್ಲಿ ಆರಾಧಿಸುವ ಸಂಪ್ರದಾಯವು, ಜೈನ ಸಂಪ್ರದಾಯದಲ್ಲಿ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಈಕೆಯನ್ನು ಕುರಿತ ಕಲ್ಪ, ಸ್ತೋತ್ರ, ಸ್ತವನಗಳು ಪೂರ್ವಾಚಾರ್ಯರಿಂದ ರಚಿತವಾಗಿದೆ.

ವಾಕ್, ಬ್ರಾಹ್ಮೀ, ಭಾರತಿ, ಗೌರೀ, ವಾಣೀ, ಭಾಷಾ, ಸರಸ್ವತಿ, ಶ್ರುತದೇವಿ, ವಚನ, ವ್ಯಾಹಾರ, ಭಾಷಿತ, ವಚಸ್ ಯೆಂಬ ವಿದ್ಯಾದೇವಿಯರ ಹೆಸರುಗಳು ಅಭಿಧಾನ್ ಚಿಂತಾಮಣಿಯಲ್ಲಿ ಕಂಡು ಬರುತ್ತದೆ. ದಿಗಂಬರ ಪರಂಪರೆಯಲ್ಲಿ ರೋಹಿಣಿ, ಪ್ರಜ್ಞಪ್ತಿ, ವಜ್ರಶೃಂಖಲಾ, ವಜ್ರಾಂಕುಶ, ಜಂಬೂನದಾಂ ಪುರುಷದತ್ತಾ, ಕಾಲಿ, ಮಹಾಕಾಲಿ, ಗೌರೀ ಗಾಂಧಾರೀ, ಜ್ವಾಲಾಮಾಲಿನಿ,ಮಾನವಿ, ವೈರೂಟಿ, ಅಚ್ಯತ ಮಹಾಮಾನಸಿ, ಹೀಗೆ ಹದಿನೇಳು ಜನ ವಿದ್ಯಾದೇವಿಯರನ್ನು ಹೆಸರಿಸಲಾಗಿದೆ. ಇವರಲ್ಲಿ ಸುಮಾರು ಈ ವಿದ್ಯಾದೇವಿಯರ ಆಕಾರ, ವಾಹನ, ಆಯುಧ ಮೊದಲಾದವುಗಳನ್ನು ಡಾ II ಹಂಪನಾ ಅವರು ಚಿತ್ರಸಮೇತ ವಿವರಿಸಿದ್ದಾರೆ. ಜೊತೆಗೆ ಶ್ವೇತಾಂಬರ ಸಂಪ್ರದಾಯದಲ್ಲಿ ಬೆಳೆದು ಬಂದಿರುವ ರೀತಿಯನ್ನೂ ವಿವೇಚಿಸಿದ್ದಾರೆ.

ಮರೆಯ ಕಂಕಾಲಿದಿನ್ನೆಯಲ್ಲಿ ದೊರೆತ ಪ್ರಾಚೀನ ಸರಸ್ವತಿಯ ವಿಗ್ರಹವನ್ನು ಲಖನೌ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿದ್ದಾರೆ. ಇದರ ಕ್ರಿ.ಶ. ೧೩೨. ಒಂದು ಅಡಿ, ಹತ್ತು ಇಂಚು ಎತ್ತರವಾಗಿರುವ ಈ ದೇವಿಯು ಚತುರಸ್ರ ಪೀಠದ ಮೇಲಿದೆ. ಎಡಗೈಯಲ್ಲಿ ಪುಸ್ತಕ, ಬಲಗೈಯಲ್ಲಿ ಜಪಮಾಲೆಯಿದೆ. ಉಳಿದ ಎರಡು ಕೈಗಳು ಭಿನ್ನವಾಗಿವೆ ಈ ದೇವಿಯ ಎರಡೂ ಪಾರ್ಶ್ವದಲ್ಲಿ ಎರಡು ಪುರುಷ ವಿಗ್ರಹಗಳನ್ನು ಕೆತ್ತಿರುವುದು ಮಹತ್ವದ ಅಂಶವಾಗಿದೆ. ಈ ವಿಗ್ರಹದ ಪೀಠದಲ್ಲಿ ಶಾಸನವಿದ್ದು ".. ಸಕಲ ಜೀವಿಗಳಿಗೆ ಸುಖವನ್ನೂ, ಹಿತವನ್ನೂ ನೀಡುವ ಈ ಸರಸ್ವತಿಯ ಪ್ರತಿಮೆಯನ್ನು ಸಿಂಹಪುತ್ರ ಶೋಭವೆಂಬ ಹೆಸರಿನ ಶಿಲ್ಪಿಯು ದಾನನೀಡಿದನೆಂದೂ, ಇದನ್ನು ಜೈನಮಂದಿರದ ರಂಗಶಾಲೆಯಲ್ಲಿ ಸ್ಥಾಪಿಸಲಾಯಿತೆಂದೂ" ವಿವರಿಸಿದೆ. ಇಷ್ಟುಪ್ರಾಚೀನ ಕಾಲಕ್ಕೆ ಸೇರಿದ ಸರಸ್ವತಿಯ ವಿಗ್ರಹವು ಬೇರೆ ಎಲ್ಲಿಯೂ ಕಂಡುಬಂದಿಲ್ಲ. ದೇವಗಡದ ೧೯ನೇ ಮಂದಿರದಲ್ಲಿ ವಿ.ಶಕ ೧೧೨೬ಕ್ಕೆ ಸೇರಿದ ಸರಸ್ವತಿಯ ವಿಗ್ರಹವು ಸಮಭಂಗಿಯಲ್ಲಿದ್ದರೆ, ಕ್ರಿ.ಶ.೧೧ನೇ ಶತಮಾನಕ್ಕೆ ಸೇರಿದ ದ್ವಿಭುಜವುಳ್ಳ ಸರಸ್ವತಿಯ ವಿಗ್ರಹವು ಬರೋಡಾ ವಸ್ತುಸಂಗ್ರಹಾಲಯದಲ್ಲಿದೆ. ಕುಶಾನ ಗುಪ್ತರ ಕಾಲಕ್ಕೆ ಸೇರಿದ ಹಲವಾರು ಸರಸ್ವತಿಯ ವಿಗ್ರಹಗಳು ಉತ್ತರ ಭಾರತದಲ್ಲಿ ಕಂಡು ಬಂದಿವೆ. ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಸರಸ್ವತಿಯ ವಿಗ್ರಹಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಬಾದಾಮಿ, ಪಟ್ಟದಕಲ್ಲು, ಎಲ್ಲೋರಾ ಮುಂತಾದ ಕಡೆಗಳಲ್ಲಿರುವ ಗುಹಾಬಸದಿಗಳಲ್ಲಿ ಸರಸ್ವತಿಯ ಉಬ್ಬುಕೆತ್ತನೆಯ ಶಿಲ್ಪವನ್ನು ನೋಡಬಹುದು. ಚತುರ್ವಿಂಶತಿ ತೀರ್ಥಂಕರರ ಬಸದಿಯಲ್ಲಿ ಒಂದೆಡೆ ಸ್ವತಂತ್ರರೂಪದಲ್ಲಿ ಪದ್ಮಾವತೀಯಕ್ಷಿಯಿದ್ದರೆ, ಇನ್ನೊಂದೆಡೆ ಸರಸ್ವತಿಯ ವಿಗ್ರಹವಿರುತ್ತದೆ. ಹೊಯ್ಸಳ, ವಿಜಯನಗರ ಕಾಲಕ್ಕೆ ಸೇರಿದ ಸರಸ್ವತಿಯ ವಿಗ್ರಹಗಳನ್ನು ಶ್ರವಣಬೆಳಗೊಳ, ಮೂಡಬಿದರೆ ಮೊದಲಾದ ಜೈನ ಕೇಂದ್ರಗಳಲ್ಲಿ ನೋಡಬಹುದು. ಹಾರುವಳ್ಳಿಯ ಕ್ರಿ.ಶ.೧೩–೧೪ನೇ ಶತಮಾನಕ್ಕೆ ಸೇರಿದ ಹರಿಪೀಠದಲ್ಲಿ ಅತ್ಯಂತ ಸುಂದರವಾದ ಕಪ್ಪು ಶಿಲೆಯ ಸರಸ್ವತಿಯ ವಿಗ್ರಹವಿದೆ. ಮೂಡಬಿದಿರೆಯ ಅಮ್ಮನವರ ಬಸದಿಯಲ್ಲಿ ಸುಮಾರು ಐದು ಅಡಿ ಎತ್ತರದ ಲೆಪ್ಪದ ಸರಸ್ವತಿಯ ವಿಗ್ರಹವಿದೆ. ಇದೇ ಕಾಲಕ್ಕೆ ಸೇರಿದ ಇನ್ನೊಂದು ವಿಗ್ರಹವು ಗುರುಗಳ ಬಸದಿಯ ಪಕ್ಕದಲ್ಲಿರುವ ಚತುರ್ವಿಂಶತೀ ತೀರ್ಥಂಕರರ

ಬಸದಿಯಲ್ಲಿದೆ. ಇದು ಹೊಯ್ಸಳ ಶೈಲಿಯ ವಿಗ್ರಹವಾಗಿದ್ದು ಕುಸುರು ಕಲೆಯ ಆಭರಣವನ್ನು ಧರಿಸಿದೆ. ಹೆಚ್ಚಿನ ಎಲ್ಲಾ ಬಸದಿಗಳನ್ನು ಜೈನ ಶಾಸ್ತ್ರ ಮತ್ತು ತ್ರಿಲೋಕದ ವಿವರವುಳ್ಳ ಕಂಚಿನ, ಅಥವಾ ತ್ರಾಮದ ಉಬ್ಬು ಫಲಕವಿರುತ್ತದೆ. ಇದನ್ನು ಶ್ರುತಸ್ಕಂದವೆಂದು ಕರೆಯುತ್ತಾರೆ (ಚಿತ್ರ) ಇದರಲ್ಲಿ ಕುಸುರಿಕೆತ್ತನೆಗೆ ಅವಕಾಶವಿಲ್ಲ.

ಸಂಕೀರ್ಣ ಪ್ರತಿಮೆಗಳು

ಪಾದದ ಚಿಹ್ನೆಯುಳ್ಳ ಲೋಹದ ಬಿಂಬವನ್ನು ಗಣಧರರ ಪಾದವೆನ್ನುತ್ತಾರೆ. ಗಣಧರರು ತೀರ್ಥಂಕರರ ದಿವ್ಯಧ್ವನಿಯನ್ನು ಅರ್ಥೈಸಿ ಸಕಲ ಜೀವಿಗಳಿಗೂ ಧರ್ಮೋಪದೇಶವನ್ನು ನೀಡಿದವರು ಧರ್ಮಪ್ರಚಾರ ಕಾರ್ಯದಲ್ಲಿ ತೊಡಗಿದವರು. ವರ್ಧಮಾನ ಮಹಾವೀರರ ತರುವಾಯ ಆತನ ಉಪದೇಶವನ್ನು ಗೌತಮ, ಸುಧರ್ಮಾ, ಜಂಬೂ, ವಿಷ್ಣು, ನಂದಿಮಿತ್ರ, ಆಪರಾಜಿತ, ಗೋವರ್ಧನ ಹೆಸರಿನ ಶ್ರುತಕೇವಲಿಗಳು ಮುಂದುವರಿಸಿಕೊಂಡು ಬಂದರು. ಈ ಆಚಾರ್ಯರ ಸ್ಮರಣೆಗಾಗಿ ಅವರಪಾದದ ಚಿಹ್ನೆಯನ್ನು ಗೌರವಿಸಲಾಗುತ್ತದೆ.

ಶ್ರವಣಬೆಳಗೊಳದ ಚಂದ್ರಗಿರಿ ಬೆಟ್ಟದ ಮೇಲೆ ನೈಸರ್ಗಿಕವಾಗಿರುವ ಗವಿಯೊಂದರಲ್ಲಿ ಪಾದದ ಚಿಹ್ನೆಯಿದ್ದು, ಭದ್ರಬಾಹು ಭಟ್ಟಾರಕರ ಪಾದವೆಂದು ಗೌರವಿಸಲಾಗುತ್ತದೆ. ಚಂದ್ರಗುಪ್ತನು ಅವುಗಳನ್ನು ಪೂಜಿಸುತ್ತಿದ್ದನೆಂದು ವಡ್ಡಾರಾಧನ ಗ್ರಂಥದಲ್ಲಿ ಹೇಳಲಾಗಿದೆ. ಪಾದದ ಕೆತ್ತನೆಯು ಸರಳವಾಗಿದ್ದು ಬಹುಶಃ ಕರ್ನಾಟಕದಲ್ಲಿ ಕಂಡುಬರುವ ಪಾದದ ಶಿಲ್ಪದಲ್ಲಿ ಇದು ಅತ್ಯಂತ ಪ್ರಾಚೀನವಾದುದು. ಇದೇ ರೀತಿ ಸಲ್ಲೇಖನ ಪೂರ್ವಕ ಮುನಿಗಳು ದೇಹತ್ಯಾಗ ಮಾಡಿದ ಸ್ಥಳಗಳಲ್ಲಿ ಪಾದದ ಚಿಹ್ನೆಯನ್ನು ಅವರ ಸ್ಮರಣೆಗಾಗಿ ರಚಿಸುವ ಸಂಪ್ರದಾಯವು ಬೆಳೆದು ಬಂದಿದೆ. ಪ್ರಸಿದ್ಧ ಜೈನ ಕೇಂದ್ರಗಳಲ್ಲಿ ಇಂಥ ಪಾದದ ಗುರುತುಗಳನ್ನು ನೋಡಬಹುದಾಗಿದೆ. ಉದಾಹರಣೆಗೆ ಆಗುಂಬೆ ಹತ್ತಿರದ ಕುಂದಾದ್ರಿ ಬೆಟ್ಟದ ಮೇಲೆ ಕುಂದಕುಂದ ಸ್ವಾಮಿಗಳದ್ದೆಂದು ಗುರುತಿಸಲಾದ ಪಾದದ ಚಿಹ್ನೆಯಿದ್ದು, ಎದುರುಗಡೆಯಲ್ಲಿ ಪಾಪನಾಶಿನೀ ಹೆಸರಿನ ತೀರ್ಥ (ಸರೋವರ)ವಿದೆ. ಕ್ರಿ.ಶ. ೭–೮ನೇ ಶತಮಾನಕ್ಕೆ ಸೇರಿದ ತೀರ್ಥಂಕರರ ಅನೇಕ ವಿಗ್ರಹಗಳನ್ನೂ ಅಲ್ಲಿ ನೋಡಬಹುದು,

ಮೂಡಬಿದರೆ, ವರಾಂಗ, ಸ್ವಾದಿ, ಗೇರುಸೊಪ್ಪೆ, ಹಾಡುವಳ್ಳಿ ಮೊದಲಾದ ಜೈನ ಕೇಂದ್ರಗಳಲ್ಲೂ ಇಂಥ ಪಾದದ ಚಿಹ್ನೆಗಳನ್ನು ನೋಡಬಹುದು.

ತ್ರಿಶಷ್ಟಿಶಲಾಕಾ ಪುರುಷರು ಜೈನ ಪರಂಪರೆಯಲ್ಲಿ ಪ್ರಸಿದ್ಧಿ ಪಡೆದವರು. ಇವರಲ್ಲಿ ೨೪ ಜನ ತೀರ್ಥಂಕರರ ಹೊರತಾಗಿ, ೧೨ ಜನ ಚಕ್ರವರ್ತಿಗಳು, ೯ ಜನ ಬಲದೇವರು, ೯ ಜನ ವಾಸುದೇವರು, ೯ ಜನ ಪ್ರತಿವಾಸುದೇವರು ಇದ್ದಾರೆ. ಇವರಲ್ಲಿ ವಿಗ್ರಹಗಳು ಕ್ವಚಿತ್ತಾಗಿ ಕಂಡುಬರುತ್ತವೆ. ಹನ್ನೆರಡು ಜನ ಚಕ್ರವರ್ತಿಗಳಲ್ಲಿ ಮೊದಲನೆಯವನಾದ ಭರತ ಚಕ್ರಿಯ (೨.೭೦ ಮೀಟರ) ಪ್ರಾಚೀನ ವಿಗ್ರಹವೊಂದು ಶ್ರವಣಬೆಳಗೊಳದ ಚಂದ್ರಗಿರಿಯ ಮೇಲೆ ಇದೆ. ಮಂಡಿಯಿಂದ ಕೆಳಭಾಗ ಹುಗಿದು ಹೋಗಿದೆ. ಇದು ಗೊಮ್ಮಟಮೂರ್ತಿಗಿಂತ ಹಿಂದಿನದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಎಲ್ಲೋರದ ಗವಿ ಬಸದಿಯಲ್ಲಿ ಜಗನ್ನಾಥ ಸಭಾ ಮಂಟಪದಲ್ಲಿ ಅತ್ಯಂತ ಸುಂದರವಾದ ಬಾಹುಬಲಿಯ ಶಿಲ್ಪದ ಜೊತೆಗೆ, ಭರತ ಚಕ್ರೇಶನ ಶಿಲ್ಪವೂ ಇದೆ. ಜೊತೆಗೆ ಬ್ರಾಹ್ಮೀ ಮತ್ತು ಸುಂದರಿಯನ್ನೂ ಚಿತ್ರಿಸಲಾಗಿದೆ. ಕುಷಾಣರ ಕಾಲಕ್ಕೆ ಸೇರಿದ ನೇಮಿನಾಥನ ವಿಗ್ರಹವೊಂದನ್ನು ಮಥುರಾ ವಸ್ತುಸಂಗ್ರಹಾಲಯದಲ್ಲಿ (ಸಂಖ್ಯೆ ೨೫೦೭) ಇಟ್ಟಿದ್ದಾರೆ. ಇದರ ಬಲಭಾಗದಲ್ಲಿ ಬಲರಾಮನ ವಿಗ್ರಹವನ್ನು ನೋಡಬಹುದು. ಇವನು ಚತುರ್ಭುಜ ಧಾರಿಯಾಗಿ ಒಂದು ಕೈಯಲ್ಲಿ ನೇಲಗಿ (ಹಲ) ಹಿಡಿದಿದ್ದಾನೆ. ತಲೆಯ ಮೇಲೆ ನಾಗನ ಹೆಡೆಯಿದೆ. ಬಲರಾಮನು ನಾಗನ ಅವತಾರಯೆಂಬುದನ್ನು ತೋರಿಸಲು ಈ ರೀತಿಯ ಕೆತ್ತನೆಯನ್ನು ಅಳವಡಿಸಿರಬೇಕು. ಎಡಭಾಗದಲ್ಲಿ ವಾಸುದೇವನಾದ ಕೃಷ್ಣನ ವಿಗ್ರಹವಿದೆ. ಕೈಗಳಲ್ಲಿ ಗದೆ, ಚಕ್ರ ಮೊದಲಾದ ಆಯುಧಗಳಿವೆ. ಬಲರಾಮ ಮತ್ತು ಕೃಷ್ಣರು ಇಪ್ಪತ್ತೆರಡನೆಯ ತೀರ್ಥಂಕರ ನೇಮಿನಾಥನ ಕಾಲದ ಬಲದೇವ ಮತ್ತು ವಾಸುದೇವರಾದ ಕಾರಣ ಈ ರೀತಿಯ ಶಿಲ್ಪವಿನ್ಯಾಸವನ್ನು ರಚಿಸಿದ್ದಾರೆ. ಅದೇ ವಸ್ತುಸಂಗ್ರಹಾಲಯದಲ್ಲಿ ಗುಪ್ತರ ಕಾಲಕ್ಕೆ ಸೇರಿದ ಮತ್ತೊಂದು ವಿಗ್ರಹದಲ್ಲಿಯೂ, ಬಲರಾಮ, ಕೃಷ್ಣರ ಬಿಂಬವನ್ನು ನೋಡಬಹುದು. ಇನ್ನೊಂದು ಸ್ವಾರಸ್ಯಕರವಾದ ಪ್ರತಿಮೆಯೆಂದರೆ ಮಾತೃದೇವಿ (ಅಂಬಿಕಾಯಕ್ಷಿ)ಯದು ಈ ಪ್ರತಿಮೆಯ ಜೊತೆಗೆ ಕಮಲ ಪೀಠದ ಮೇಲೆ ಸೂರ್ಯ, ಚಂದ್ರ, ಮಂಗಳ, ಬುಧ, ಗುರು, ಶುಕ್ರ, ಶನಿ ಈ ಎಂಟು

ಗ್ರಹಗಳನ್ನು(ಸಂಖ್ಯೆ ಬಿ. ೬೫,೬೬) ಸ್ವತಂತ್ರವಾಗಿ ತೋರಿಸಿದ್ದಾರೆ ಈ ವಿಗ್ರಹವು ಗುಪ್ತರ ಆನಂತರ ಕಾಲದ್ದಿರಬೇಕೆದು ಊಹಿಸುತ್ತಾರೆ.

ಬಸದಿಯ ಸಮವಸರಣದ ಪ್ರತಿಕೃತಿಯೆಂಬುದನ್ನು ಈಗಾಗಲೇ ಉಲ್ಲೇಖಿಸಲಾಗಿದೆ. ಅಲ್ಲಿ ವ್ಯಂತರ ಜಾತಿಗೆ ಸೇರಿದ ಜಯ, ವಿಜಯ, ಅಜಿತಾ, ಅಪರಾಜಿತಾ ಈ ನಾಲ್ಕು ದೇವಿಯರು ನಾಲ್ಕುದ್ವಾರದಲ್ಲಿ ನಿಂತಿರುತ್ತಾರೆ. ಇದೇ ರೀತಿ ಕುಮುಗ, ಅಂಜನ, ವಾಮನ, ಪುಷ್ಪದಂತ ಹೆಸರಿನ ನಾಲ್ವರು ಪ್ರತೀಹಾರರಿತ್ತಾರೆ. ಇವರನ್ನು ಬಸದಿಯ ಪ್ರವೇಶದ್ವಾರದಲ್ಲಿ ಇವರನ್ನು ದ್ವಾರಪಾಲಕರ ರೂಪದಲ್ಲಿ ತೋರಿಸಲಾಗುತ್ತಿದೆ. ಇಂಥ ಕೆತ್ತನೆಯನ್ನು ಶಿಲಾಮಯ ಬಸದಿಗಳಲ್ಲಿ ಸಾರ್ವತ್ರಿಕವಾಗಿ ಕಾಣಬಹುದು. ಉದಾಹರಣೆಗೆ ಮೂಡಬಿದಿರೆಯ ಬಸದಿಯು ಸಮವಸರಣದ ಪ್ರತಿಕೃತಿಯೆಂಬುದನ್ನು ಈಗಾಗಲೇ ಉಲ್ಲೇಖಿಸಲಾಗಿದೆ. ಬಸದಿಯ ಸಮವಸರಣದ ಪ್ರತಿಕೃತಿಯೆಂಬುದನ್ನು ಈಗಾಗಲೇ ಉಲ್ಲೇಖಿಸಲಾಗಿದೆ. ಅಲ್ಲಿ ವ್ಯಂತರಜಾತಿಗೆ ಸೇರಿದ ಜಯ, ವಿಜಯ, ಅಜಿತಾ, ಅಪರಾಜಿತಾ ಈ ನಾಲ್ಕು ದೇವಿಯರು ನಾಲ್ಕು ದ್ವಾರಗಳಲ್ಲಿ ನಿಂತಿರುತ್ತಾರೆ. ಇದೇ ರೀತಿ ಕುಮುದ, ಅಂಜನ, ವಾಮನ, ಪುಷ್ಪದಂತ ಹೆಸರಿನ ನಾಲ್ವರು ಪ್ರತೀಹಾರರಿರುತ್ತಾರೆ. ಇವರನ್ನು ಬಸದಿಯ ಪ್ರವೇಶ ದ್ವಾರದಲ್ಲಿ ದ್ವಾರಪಾಲಕರ ರೂಪದಲ್ಲಿ ತೋರಿಸಲಾಗುತ್ತದೆ. ಇಂಥ ಕೆತ್ತನೆಯನ್ನು ಶಿಲಾಮಯ ಬಸದಿಗಳಲ್ಲಿ ಸಾರ್ವತ್ರಿಕವಾಗಿ ಕಾಣಬಹುದು. ಉದಾಹರಣೆಗೆ ಮೂಡಬಿದಿರೆಯ ಹೊಸಬಸದಿಯ ಪ್ರವೇಶ ದ್ವಾರದಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ದ್ವಾರಪಾಲಕರ ಸುಂದರವಾದ ವಿಗ್ರಹವಿದೆ. ಚತುರ್ಭುಜಧಾರಿಗಳಾಗಿದ್ದು ಶಂಕ, ಚಕ್ರ, ಗದಾ, ಪದ್ಮಗಳನ್ನು ಹಿಡಿದ್ದಾರೆ. ಇವರ ಜೊತೆಗೆ ಇನ್ನೆರಡು ಮದನಿಕೆಯರ ಸುಂದರವಾದ ವಿಗ್ರಹಗಳಿದ್ದು ಬಹುಶಃ ಇವರು ವ್ಯಂತರದೇವಿಯರನ್ನು ಪ್ರತಿನಿಧಿಸುತ್ತಿರಬೇಕು. ವ್ಯಂತರ ದೇವರಲ್ಲಿ ಸ್ತ್ರೀ–ಪುರುಷವೆಂಬ ವರ್ಗವಿದ್ದು ಜೊತೆಗೆ ಕಿನ್ನರ, ಕಿಂಪುರುಷ, ಮಹೋರಗ, ಗಂಧರ್ವ, ಯಕ್ಷ, ರಾಕ್ಷಸ, ಭೂತ, ಪಿಶಾಚವೆಂಬ ಎಂಟು ವಿಭಾಗಗಳೂ ಇವೆ. ಯಕ್ಷವರ್ಗದಲ್ಲೂ ಶಾಸನ ದೇವತೆಗಳನ್ನು ಬಿಟ್ಟು ಮಣಿಭದ್ರ,ಪೂರ್ಣಭದ್ರ, ಶೈಲಭದ್ರ ಮೊದಲಾಗಿ ಹನ್ನೆರಡು ಭೇದಗಳಿವೆ. ಜೊತೆಗೆ

ಜ್ಯೋತಿಷ್ಯರು, ಕಲ್ಪಾತೀತ ವೈಮಾನಿಕರೂ ಇದ್ದಾರೆ. ಇಂಥ ಕೆಲವು ಶಿಲ್ಪಗಳು ದಕ್ಷಿಣೋತ್ತರ ಭಾರತದ ಪ್ರಾಚೀನ ಬಸದಿಗಳ ದೇವಕೋಷ್ಠ ಹಾಗೂ ಹೊರಭಿತ್ತಿಗಳ ಮೇಲೂ, ಕೆಲವು ಪ್ರಾಚೀನ ಗುಹಾಂತರ್ಗತ ಬಸದಿಗಳ ಅಂಕಣಗಳ ಮೇಲೂ ಬಂದಿವೆ.

ಕೆಲವು ಚಾರಿತ್ರಿಕ ವ್ಯಕ್ತಿಗಳು ಸಲ್ಲೇಖನ ಸ್ವೀಕರಿಸಿ ಮಡಿದಾಗ ಅವರ ಸ್ಮಾರಕಗಳನ್ನು ಸ್ವತಂತ್ರ ವಿಗ್ರಹಗಳ ರೂಪದಲ್ಲಿ ಕೆತ್ತಿರುವುದು ಕಂಡುಬಂದಿದೆ. ಉದಾಹರಣೆಗೆ ಗೇರುಸೊಪ್ಪೆಯ ರಾಣಿಯಾದ ಮಾಬಕ್ಕರಸಿಯು ಸಲ್ಲೇಖನಕ್ಕೆ ಕುಳಿತಿರುವ ಒಂದು ಸುಂದರ ಶಿಲ್ಪವು ನಗರಬಸ್ತಿಕೇರಿಯಲ್ಲಿದೆ. ಸನ್ಯಾಸವನ್ನು ಸ್ವೀಕರಿಸಿ ಆಕೆ ಧ್ಯಾನಕ್ಕೆ ಕುಳಿತ ಭಂಗಿ, ತೊಟ್ಟ ವೇಷ ಭೂಷಣಗಳು ಆಕರ್ಷಕವಾಗಿವೆ. ಬಾದಾಮಿಯ ಗುಹಾಬಸದಿಯಲ್ಲೂ ಸಲ್ಲೇಖನದಿಂದ ಮುಕ್ತಿಹೊಂದಿದ ಜಕ್ಕವ್ವೆಯ ಸುಂದರ ಶಿಲ್ಪವಿದೆ. ಹೀಗೆ ಜೈನ ಸಂಸ್ಕೃತಿಯಲ್ಲಿ ಶಿಲ್ಪವಿನ್ಯಾಸಗಳು ವಿಶಿಷ್ಟರೀತಿಯಲ್ಲಿ ಬೆಳೆದುಕೊಂಡು ಬಂದಿರುವುದು ಕುತೂಹಲದ ವಿಷಯವಾಗಿದೆ. ಈ ಎಲ್ಲಾ ಶಿಲ್ಪಗಳ ಅಧ್ಯಯನವು ಇನ್ನೂ ವ್ಯಾಪಕವಾಗಿ ಮತ್ತು ಕ್ರಮಬದ್ಧವಾಗಿ ನಡೆಯುವ ಅಗತ್ಯವಿದೆ.

ಅಡಿಟಿಪ್ಪಣಿಗಳು

ಡಾ || ಹೀರಾಲಾಲ ಜೈನ ಅನು. ಅಣ್ಣಾರಾಯ ಮಿರ್ಜಿ: ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ, ಪುಟ ೩೬೫,೧೯೭೧ ಜೈನ ಸಂಸ್ಕೃತಿ ಸಂರಕ್ಷಕ ಸಂಘ, ಸೊಲ್ಲಾಪುರ.

ಅದೇ

ಪ್ರೊ. ಪ್ರಭಾಕರ ಎಸ್. (ಸಂ): ತ್ಯಾಗಸಂದೇಶ. ಪುಟ.೧೦೨,೧೯೮೨, ಶ್ರೀ ಧರ್ಮಸ್ಥಳ ಬಾಹುಬಲಿ ಪ್ರತಿಷ್ಠಾಪನಾ ಮಹೋತ್ಸವ ಸಮಿತಿ, ಧರ್ಮಸ್ಥಳ.

ತೆಂಕನಾಡು: ೩೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ, ಪುಟ ೬೨. ೧೯೪೭ ಸ್ವಾಗತಸಮಿತಿ, ಕನ್ನಡ ಸಾಹಿತ್ಯ ಸಮ್ಮೇಳನ, ಕಾಸರಗೋಡು.

ಅದೇ.

ಗಡಡಘಿಣಡ ಘಿಡಊ ಕಾ.೨೦೨

ಕರ್ನಾಟಕ ಮತ್ತು ಜೈನ ಸಂಸ್ಕೃತಿ: ಆರು ಉಪನ್ಯಾಸಗಳು, ಡಾ || ಸುಂದರ. ಕರ್ನಾಟಕದಲ್ಲಿ ಜೈನ ಶಿಲ್ಪ, ಪುಟ ೧೯೩. ೧೯೭೫, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಒ.ಡಫಿಣಡಡ ಕಾ. ೬೫ ೨೯ ೧೯೩೪–೪೦, ಕ್ರಿ.ಶ. ೧೪೮೪

ಶಾಸನ ಪದ್ಯ ಮಂಜರಿ, ಪುಟ ೩೧೩

ಕರ್ನಾಟಕ ಮತ್ತು ಜೈನ ಸಂಸ್ಕೃತಿ: ಪೂರ್ವೋಕ್ತ ಪುಟ ೧೫೬

ಅದೇ " " ಪುಟ ೧೫೫

ಸುದ್ದಿ ಬಿಡುಗಡೆ – ದೀಪಾವಳಿ ವಿಶೇಷಾಂಕ, ೧೯೯೪, ಪುಟ ೧೭ ನೋಡಿ 'ಅಂತರಿಕ್ಷದಲ್ಲಿ ಬ್ರಹ್ಮದೇವರಗುಡಿ' ಎಸ್.ಡಿ. ಶೆಟ್ಟಿ ಉಜಿರೆ.

ಅದೇ

ಡಾ || ಹೀರಾಲಾಲ್ ಜೈನ. ಪೂರ್ವೋಕ್ತ, ಪುಟ ೩೭೦–೩೭೭

ಅದೇ " " ಪುಟ ೩೭೪

ಅದೇ " " ಪುಟ ೩೭೫

ಅದೇ " " ಪುಟ ೩೭೬

ಒ.ಡಫಿಣಡ ಕಾ. ಡ ಕಾ.೬೬

ಮಹಾವೀರ ರಜತ ಮಹೋತ್ಸವ ಸ್ಮರಣಸಂಚಿಕೆ. ಲೇಖನ: ಎಸ್.ಡಿ.ಶೆಟ್ಟರ ಬಸದಿಯ ಕೆಲವು ಚಾರಿತ್ರಿಕ ಅಂಶಗಳು – ಪುಟ.೧೧. ೧೯೯೩, ಸ್ಥಂಭವು ಶ್ರೀ ಮಹಾವೀರ ಸಂಘ, ಮೂಡಬಿದ್ರೆ.

ಸ್ವತ ಪರಿಶೀಲನೆ ಈ ಧರ್ಮಸ್ಥಳದ ಜಂಜುನಾಥ ವಸ್ತುಸಂಗ್ರಹಾಲಯದಲ್ಲಿದೆ.

ಸ್ವತ ಪರಿಶೀಲನೆ

ಸ್ವತ ಪರಿಶೀಲನೆ

ವಿವೇಕಾಭ್ಯುದಯ ಮಂಡಲ ೫ ಕಿರಣ ೬ ನವಂಬರ್ ೧೯೩೭ ಪುಟ ೧ 'ನವದೇವತೆಗಳು' ಲೇಖನ ನೋಡಿ.

ಅದೇ.

ಹಂಪ. ನಾಗರಾಜಯ್ಯ: ಯಕ್ಷ–ಯಕ್ಷಿಯರು ಪುಟ. ೧೭ ೧೯೭೬ ಚಂದ್ರಸಾಗರವರ್ಣಿ ಗ್ರಂಥಮಾಲೆ ೧೦೭೯, ೫ನೇ ಬ್ಲಾಕ ರಾಜಾಜಿನಗರ, ಬೆಂಗಳೂರು–೧೦.

ಅದೇ " " " ಪುಟ ೧೮.

ಅದೇ " " " ಪುಟ ೨೦.

ಅದೇ " " " ಪುಟ ೨೮.

ಅದೇ " " " ಪುಟ ೨೮.

ಡಾ. ಹೀರಾಲಾಲ್ ಜೈನ: ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ ಪುಟ ೩೭೧ ಪೂರ್ವೋಕ್ತ

ಅದೇ " " " ಪುಟ ೩೭೧.

ಅದೇ " " " ಪುಟ ೩೬೨.

ಕರ್ನಾಟಕ ಮತ್ತು ಜೈನ ಸಂಸ್ಕೃತಿ ಪುಟ ೧೭೭ ಪೂರ್ವೋಕ್ತ

ಡಾ. ಹೀರಾಲಾಲ್ ಜೈನ: ಭರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ ಪುಟ ೩೬೧ ಪೂರ್ವೋಕ್ತ

ಸ್ವತಃ ಪರಿಶೀಲನೆ

ಸ್ವತಃ ಪರಿಶೀಲನೆ

ಡಾ || ರಮೇಶ ಕೆ.ವಿ.(ಸಂ) ತುಳುನಾಡಿನ ಶಾಸನಗಳು ಪುಟ ೧೨, ಶಾಸನ ಸಂಖ್ಯೆ. ೩ ೧೯೭೮ ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರ, ಉಡುಪಿ

ಶಾಸ್ತ್ರೀ ಲೋಕನಾಥ ವಿ (ಸಂ) ಸೋತ್ರ ಮಂತ್ರ ಸಾರ ಸಂಗ್ರಹ ಪುಟ ೧೪೬ ವೀರರಾಣಿ ಭವನ, ಮೂಡಬಿದರೆ

ಚಂದ್ರಶೇಖರ (ಸಂ): ಚಂದ್ರಮನ ಗೊಮ್ಮಟೇಶ್ವರ ಚರಿತೆ ಪುಟ ೧೫೯. ೧೯೫೩ ಮದ್ರಾಸು.

ಮಂಜುವಾಣಿ ಆಗಷ್ಟ ೧೦ ೧೯೯೬ ಪುಟ ನೋಡಿ ನಾಗಾರಾಧನೆಯ ಕ್ಲ್ಪನೆ. ಡಾ || ಕೆ.ಶ್ರೀಕಂಠಯ್ಯ.

ರಾಜಗೋಪಾಲ ಕ. ವೆಂ (ಸಂ): ತುಳುವರ ಆಚರಣೆಯಲ್ಲಿ ಕಲಾವಂತಿಡೆ ಪುಟ ೧೩ ನೋಡಿ ನಾಗಮಂಡಲ ಡಕ್ಕೆ ಬಲಿ – ಎ.ವಿ. ನಾವಡ ೧೯೮೯ ಬೆಂಗಳೂರು.

ಡಾ II ಹೀರಾಲಾಲ್ ಜೈನ್ ಭಾರತೀಯ ಸಂಸ್ಕೃತೀಯ ಜೈನ ಧರ್ಮದ ಕೊಡುಗೆ ಪುಟ ೬, ಪೂರ್ವೋಕ್ತ

ಹಂಪ. ನಾಗರಾಜಯ್ಯ ಯಕ್ಷ–ಯಕ್ಷಿಯರು ಪುಟ. ೫೩ ಪೂರ್ವೋಕ್ತ

ಅದೇ " ಪುಟ ೫೩ "

ಅದೇ " ಪುಟ ೫೫–೬೧ "

ಡಾ II ಹೀರಾಲಾಲ್ ಜೈನ್ ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ, ಪುಟ. ४४೬ ಪೂರ್ವೋಕ್ತ

ಅದೇ " " "

ಆಚಾರ್ಯ ವಸುನಂದಿ ಕೃತ ಶ್ರಾವಕಾಚಾರ

ಡಾ.ಎನ್.ಸುರೇಶಕುಮಾರ

ದಿಗಂಬರ ಜೈನ–ಪರಂಪರೆಯಲ್ಲಿ ಶ್ರಾವಕಧರ್ಮವನ್ನು ವಿವರಿಸುವ ಬಹಳಷ್ಟು ಕೃತಿಗಳು ದೊರಕುತ್ತವೆ ಅಂತಹವುಗಳಲ್ಲಿ ಆಚಾರ್ಯ ವಸುನಂದಿಯವರು ರಚಿಸಿರುವ ಶ್ರಾವಕಾಚಾರ ಗ್ರಂಥವು ಒಂದಾಗಿದೆ. ಇದರ ಮೂಲ ಹೆಸರು ಉವಾಸಯಜ್ಝಯಣ ಎಂದು. ಈ ಕೃತಿ ಪ್ರಾಕೃತ ಭಾಷೆಯಲ್ಲಿ ರಚನೆಗೊಂಡಿದೆ. ಪ್ರಾಯಶಃ ಪ್ರಾಕೃತದ ಹೆಸರನ್ನು ಉಚ್ಚಾರ ಮಾಡುವುದು ಕಠಿಣ ಎಂಬುದಕ್ಕಾಗೆಯೇ ಅಥವಾ ಹಲವಾರು ಶ್ರಾವಕಾಚಾರ ಕೃತಿಗಳಿರುವುದರಿಂದ ಅವುಗಳಲ್ಲಿ ಯಾವುದೋ ಒಂದನ್ನು ಆಯ್ದುಕೊಳ್ಳುವಾಗ ಗ್ರಂಥನಾಮವನ್ನು ಸೂಚಿಸುವುದು ಕಠಿಣವಾಗುತ್ತದೆ ಎಂದು ಕರ್ತೃ ನಾಮವನ್ನೇ ಹೇಳಿ ಅದರೊಂದಿಗೆ ಶ್ರಾವಕಾಚಾರ ಎಂದು ಹೇಳುವ ರೂಢಿ ಬಂದಿದ್ದಿರಬೇಕು. ಹೀಗಾಗಿ ಆ ವಸುನಂದಿಯವರ ಕೃತಿ ಉವಾಸಯಜ್ಜಯಣ ಕ್ಕೆ ವಸುನಂದಿ–ಶ್ರಾವಕಾಚಾರ ಎಂಬ ನಾಮವು ರೂಢಿಗತವಾಗಿರಬೇಕು. ಈ ಕೃತಿಯ ಹಲವಾರು

ವೈಶಿಷ್ಟ್ಯಗಳನ್ನು ಹೊಂದಿರುವ ಉತ್ತಮ ಕೃತಿ ಆಗಿದೆ. ಪ್ರಾಯಶಃ ಪ್ರಾಕೃತ ಭಾಷೆಯಲ್ಲಿಯೇ ರಚನೆಗೊಂಡಿರುವಂಥ ಶ್ರಾವಕಾಚಾರ ಕೃತಿಗಳಲ್ಲಿ ಏಕೈಕ ಕೃತಿ ಇದಾಗಿದೆ.

ಜೈನ ಪರಂಪರೆಯಲ್ಲಿ ಆಚಾರಾಂಗವೇ ಮೊದಲಾದ ದ್ವಾದಶಾಂಗ ಆಗಮಗಳಿವೆ. ಅವುಗಳಲ್ಲಿ ಏಳನೆಯ ಅಂಗಶ್ರುತವೇ ಉವಾಸಯಜ್ಝಯಣ ಆಗಿದೆ. ಈ ಎಲ್ಲ ಆಗಮಗಳ ಭಾಷೆಯೂ ಆರ್ಷ ಪ್ರಾಕೃತವಾಗಿದೆ. ಆದರೆ, ಆ ಹನ್ನೆರಡು ಅಂಗಶ್ರುತಗಳು ಇಂದು ನಮ್ಮಲ್ಲಿ ಉಳಿದಿಲ್ಲ ಎಂಬುದು ಪರಂಪರೆಯ ಹೇಳಿಕೆಗಳಿವೆ. ಆದರೆ ಪ್ರಕೃತ ವಸುನಂದಿಯವರು ಬರೆದಿರುವ ಕೃತಿಯನ್ನು ಗಮನಿಸಿದಾಗ ಕೃತಿಯು ಪಾರಂಪರಿಕವಾದ ಆಗಮವೇ ಇರಬೇಕೆಂದು ತೋರುತ್ತದೆ. ಇದನ್ನು ಪುಷ್ಟಗೊಳಿಸುವ ಅಂಶಗಳು ಕೃತಿಯಲ್ಲಿಯೇ ದೊರಕುತ್ತವೆ.

ಸಾಯಾರೋಣಾಯಾರೋ ಭವಿಯಾಣಂ ಜೇಣ ದೇಸಿಓ ಧಮ್ಮೋ ।

ಣಮಿಊಣ ತಂ ಜಿಣಿಂದಂ ಸಾವಯಧಮ್ಮಂ ಪರೂವೇಮೋ ॥ ೧ ॥

ಸಾಗಾರ ಹಾಗೂ ಅನಗಾರ ಧರ್ಮವನ್ನು ಭವ್ಯರಿಗೆ ಉಪದೇಶಿಸಿರುವ ಅಂತಹ ಜಿನೇಂದ್ರನನ್ನು ನಮಸ್ಕರಿಸಿ ಶ್ರಾವಕಧರ್ಮವನ್ನು ಹೇಳುತ್ತೇವೆ.

ವಿಉಲಗಿರಿಪವ್ವಏ ಣಂ ಇಂದಭೂಇಣಾ ಸೇಣಿಯಸ್ಸ ಜಹ ಸಿಟ್ಠಂ ।

ತಹ ಗುರುಪರಿವಾಡೀಏ ಭಣಿಜ್ಜಮಾಣಂ ಣಿಸಾಮೇಹ ॥ ೨ ॥

ವಿಪುಲಗಿರಿಪರ್ವತದಲ್ಲಿ ಇಂದ್ರಭೂತಿಯು ಹೇಗೆ ಶ್ರೇಣಿಕನಿಗೆ ಉಪದೇಶಿಸಿದ್ದಾರೋ ಹಾಗೆ ಗುರುಪರಂಪರೆಯಿಂದ ಬಂದಿರುವ ಇದನ್ನು ಕೇಳಿರಿ – ಗುರುಪರಿವಾಡೀಏ ಭಣಿಜ್ಜಮಾಣಂ ಣಿಸಾಮೇಹ.

ಪವ್ವೇಸು ಇತ್ಥಿಸೇವಾ ಅಣಂಕೀಡಾ ಸಯಾ ವಿವಜ್ಜಂತೋ ।

ಥೂಲಯಡಬಂಭಯಾರೀ ಜಿಣೇಹಿ ಭಣಿಓ ಪವಯಣಮ್ಮಿ ॥ ೨೧೨ ॥

ಜಂ ಪರಿಮಾಣಂ ಕೀರಇ ಧಣ–ಧಣ್ಣ–ಹಿರಣ್ಣ ಕಂಚಣಾಈಣಂ ।

ತಂ ಜಾಣ ಪಂಚಮವಯಂ ಣಿದ್ದಿಟ್ಠಮುವಾಸಯಜ್ಝಯಣೇ ॥ ೨೧೩ ॥

ಪರ್ವದಿನಗಳಲ್ಲಿ ಸ್ತ್ರೀಸೇವನೆ, ಅನಂಗಕ್ರೀಡೆಗಳನ್ನು ನಿರಂತರವಾಗಿ ತೊರೆದಿರುವುದೇ ಸ್ಥೂಲತರ–ಬ್ರಹ್ಮಚರ್ಯ ಎಂದು ಜಿನೇಂದ್ರದೇವರು ಪ್ರವಚನದಲ್ಲಿ ಹೇಳಿದ್ದಾರೆ.

ಧನ–ದಾನ್ಯ–ಬೆಳ್ಳಿ–ಚಿನ್ನ ಮುಂತಾದವುಗಳನ್ನು ಕುರಿತು ಯಾವನು ಮಿತಿಗೊಳಿಸುತ್ತಾನೊ ಅದು ಐದನೆಯ ವ್ರತ ಎಂದೂ ಉಪಾಸಕಾಧ್ಯಯನ ದಲ್ಲಿ ಹೇಳಿದೆ.

ಆಹಾರೋಸಹ ಸತ್ಥಾಭಯಭೇಓ ಜಂ ಚಉವ್ವಿಹಂ ದಾಣಂ ।

ತಂ ವುಚ್ಚಇ ದಾಯುವ್ವಂ ಣಿದ್ದಿಟ್ಠಮುವಾಸಯಜ್ಝಯಣೇ ॥ ೨೩೩ ॥

ಉಪಾಸಕಾಧ್ಯಯನ ದಲ್ಲಿ ಹೇಳಿರುವ ಆಹಾರ–ಔಷಧ–ಶಾಸ್ತ್ರ–ಅಭಯ ಎಂದು ನಾಲ್ಕು ವಿಧದ ದಾನವಾಗಿದೆ, ಅದೇ ದಾತವ್ಯವಾಗಿದೆ.

ಸಾವಯಗುಣೋವವೇದೋ ಉವಾಸಯಜ್ಝಯಣ ಸತ್ಥಥಿರಬುದ್ಧೀ ।

ಏವಂ ಗುಣೋ ಪಇಟ್ಠಾಇರಿಓ ಜಿಣಸಾಸಣೇ ಭಣಿಓ ॥ ೩೮೬ ॥

ಶ್ರಾವಕನ ಗುಣಗಳಿಂದ ಕೂಡಿದ ಉಪಾಸಕಾಧ್ಯಯನ ಶಾಸ್ತ್ರದಲ್ಲಿ ಸ್ಥಿರಬುದ್ಧಿ ಯುಳ್ಳಂತಹ, ಈ ಪ್ರಕಾರದ ಗುಣಗಳುಳ್ಳವನನ್ನು ಜಿನಾಗಮದಲ್ಲಿ ಪ್ರತಿಷ್ಠಾಚಾರ್ಯ ಎಂದು ಹೇಳಿದೆ.

ತಸ್ಸ ಪಸಾಏಣ ಮಏ ಆಇರಿಯ ಪರಂಪರಾಗಯಂ ಸತ್ಥಂ ।

ವಚ್ಛಲ್ಲಯಾಏ ರಇಯಂ ಭವಿಯಾಣಮುವಾಸಯಜ್ಝಯಣಂ ॥ ೫೪೪ ॥

ಅವರ ಅನುಗ್ರಹದಿಂದ ನಾನು ಆಚಾರ್ಯ ಪರಂಪರೆಯಿಂದ ಬಂದಿರುವಂಥ ಉವಾಸಯಜ್ಝಯಣಂ (ಉಪಾಸಕಾಧ್ಯಯನ)ವನ್ನು ಭವ್ಯಜನರ ಮೇಲೆನ ವಾತ್ಸಲ್ಯದಿಂದ ರಚಿಸಿದೆನು.

ಈ ಮೇಲಿನ ಉಲ್ಲೇಖಗಳಲ್ಲಿ ಆಚಾರ್ಯ ವಸುನಂದಿಯವರು ಸ್ಪಷ್ಟವಾಗಿ ತಾನು ಗುರು ಪರಿಪಾಟಿಯಿಂದ, ಜಿನರಿಂದ ಹೇಳಿರುವ ಪ್ರವಚನದಿಂದ ಉಪಾಸಕಾಧ್ಯಯನ ವನ್ನು ಹೇಳಿರುವುದು ಎಂದಿದ್ದಾರೆ. ಈ ಕಾರಣ ಕೃತಿಯ ಆಚಾರ್ಯ ವಸುನಂದಿಯವರ ಸ್ವತಂತ್ರ ರಚನೆಯಾಗಿಲ್ಲ. ಗುರು ಪರಂಪರೆಯಲ್ಲಿ ಬಂದಿರುವ ಉವಸಯಜ್ಝಯಣ (೨೩೩)ವನ್ನು

ಲಿಖಿತರೂಪದಲ್ಲಿ ಬರೆದಿರುವರು ಎಂದು ವಿದಿತವಾಗುವುದಲ್ಲದೆ ದಿಗಂಬರ ಪರಂಪರೆಯ ಆಗಮ ವೆಂದೂ ಸ್ಪಷ್ಟಪಡುವುದು.

ಕೃತಿಯಲ್ಲಿ ಮೊದಲಿಗೆ ಜಿನರಿಗೆ ನಮಸ್ಕರಿಸಿ ವಸ್ತು ನಿರ್ದೇಶನ ಮಾಡಿದೆ–

ದಂಸಣ– ವಯ– ಸಾಮಾಇಯ–ಪೋಸಹ–ಸಚಿತ್ತ ರಾಇಭತ್ತೇ ಯ ।

ಬಂಭಾರಂಭ–ಪರಿಗ್ಗಹ– ಅಣುಮಣ್–ಉದ್ದಿಟ್ಠ ದೇಸವಿರಯಮ್ಮಿ ॥ ೪ ॥

ಎಂದು ಶಾವಕರ ಹನ್ನೊಂದು ಪ್ರತಿಮೆಗಳನ್ನು ಹೇಳಿದೆ. ಆಚಾರ್ಯ ಕುಂದಕುಂದರು ಚಾರಿತ್ರ–ಪ್ರಾಭೃತದಲ್ಲಿ ಹಾಗೂ ಕಾರ್ತಿಕೇಯಾನುಪ್ರೇಕ್ಷಾದಲ್ಲಿ ಸೂಚಿಸಿರುವ ಶ್ರಾವಕ–ಪ್ರತಿಮೆಗಳು ಆಚಾರ್ಯ ವಸುನಂದಿ ಶ್ರಾವಕಚಾರದಲ್ಲಿ ಸೂಚಿತವಾದ ಶ್ರಾವಕ–ಪ್ರತಿಮೆಗಳಲ್ಲಿಯೂ ಸಮಾನತೆಗಳಿವೆ. ಆಚಾರ್ಯ ವಸುನಂದಿ ದರ್ಶನಪ್ರತಿಮೆಯನ್ನು ಹೇಳುವಾಗ,

ಅತ್ತಾಗಮ ತಚ್ಚಾಣಂ ಜಂ ಸದ್ದಹಣಂ ಸುಣಿಮ್ಮಲಂ ಹೋಇ

ಸಂಕಾಇ ದೋಸರಹಿಯಂ ತಂ ಸಮ್ಮತ್ತಂ ಮುಣೇಯವ್ವಂ ॥ ೬ ॥

ಆಪ್ತ (ದೇವ), ಆಗಮ (ಶಾಸ್ತ್ರ), ತತ್ತ್ವಗಳನ್ನು ಶಂಕಾದಿದೋಷಗಳಿಲ್ಲಂದತೆ ನಿರ್ಮಲವಾದ ಭಾವದಿಂದ ನಂಬುವುದೇ ಸಮ್ಯಕ್ತವೆಂದಿದ್ದಾರೆ. ಇಲ್ಲಿನ ಹೇಳಿಕೆ ಹಾಗೂ ಅನ್ಯತ್ರ ದೇವ–ಗುರುಶಾಸ್ತ್ರಗಳ ನಂಬಿಕೆ ಎಂಬ ಹೇಳಿಕೆಗಳಲ್ಲಿ ಸ್ವಲ್ಪದರ ವ್ಯತ್ಯಾಸವು ವಿರುದ್ಧವಾಗಿ ತೋರುತ್ತದೆ. ಆಗಮದಲ್ಲಿಯೇ ತತ್ವಗಳು ಅಡಕವಾಗುತ್ತವೆ. ಆದುದರಿಂದ, ಅವೆರಡನ್ನು ಪೃಥಕ್ಕಾಗಿ ಹೇಳುವ ಅಗತ್ಯವಿಲ್ಲ ಎನ್ನಬಹುದು. ಆದರೂ ತತ್ತ್ವಾರ್ಥಸೂತ್ರದಲ್ಲಿನ ತತ್ತ್ವಾರ್ಥ ಶ್ರದ್ಧಾನಂ ಸಮ್ಯಗ್ದರ್ಶನಂ ಎಂಬುದನ್ನು ಸ್ಪಷ್ಟವಾಗಿ ಹೇಳಿದೆ. ಅಲ್ಲಿ ದೇವ–ಗುರು ಎರಡನ್ನೂ ಕೈಬಿಡಲಾಗಿದೆ. ಅಂದ ಮಾತ್ರಕ್ಕೆ ಅದು ವಿರುದ್ಧ ಕಥನವೆನ್ನಲಾಗದು. ತತ್ವಾರ್ಥಗಳನ್ನು ತಿಳಿಯಬೇಕಾದರೆ ಆಗಮವನ್ನು ಆಶ್ರಯಿಸಲೇಬೇಕು, ಆಗಮದಲ್ಲಿ ಜಿನೇಂದ್ರ ಅವರ ಸ್ವರೂಪ ಕಥನಗಳೂ ಇವೆ. ಆದುದರಿಂದ ದೇವ–ಗುರುಗಳನ್ನು ಪೃಥಕ್ಕಾಗಿ ಹೇಳದಿದ್ದರೂ ಪರೋಕ್ಷದಿಂದ ಹೇಳಿದಂತೆ ಆಗಿದೆ. ಅದೇ ರೀತಿ ಆಚಾರ್ಯ ವಸುನಂದಿಯವರೂ ಗುರು ವನ್ನು ಕುರಿತು ಹೇಳಿಲ್ಲದಿದ್ದರೂ ತತ್ವಗಳನ್ನು ತಿಳಿಯಬೇಕಾದರೆ ಶ್ರಾವಕನು ಗುರುವನ್ನು ಆಶ್ರಯಿಸಲೇಬೇಕು. ಆದ ಕಾರಣ ಗುರುವಿನ ಆಶ್ರಯ

ತತ್ವದ ಕಾರಣಕ್ಕಾಗಿದೆ. ತತ್ವದ ಶ್ರದ್ಧಾನವಿಲ್ಲದೆ ಸಮ್ಯಕ್ತ್ವವೂ ಆಗದು. ಆದುದರಿಂದ ಕೃತಿಯಲ್ಲಿ ಗುರು ವಿನ ಸ್ಥಾನದಲ್ಲಿ ತತ್ವಕ್ಕೇ ಮಹತ್ವವನ್ನು ನಿಡಿದ್ದಿರಬೇಕು. ದರ್ಶನ ಪ್ರತಿಮೆಯನ್ನು ವಿವರಿಸುವಾಗ ಜೀವಾದಿತತ್ವಗಳನ್ನು ಸೈದ್ಧಾಂತಿಕ ವಿವೇಚನೆಯಿಂದ ವರ್ಣಿಸಿದೆ. ಸಮ್ಯಕ್ತ್ವದ ಎಂಟು ಅಂಗಗಳು ಹಾಗೂ ಅವುಗಳಲ್ಲಿ ಪ್ರಸಿದ್ಧರಾದವರ ನಾಮ ಸೂಚಿಯನ್ನು ಹೇಳಿದೆ.

ವಸುನಂದಿ ಶ್ರಾವಕಾಚಾರದ ಮತ್ತೊಂದು ವೈಶಿಷ್ಟ್ಯವೆಂದರೆ ಇದರಲ್ಲಿ ಶ್ರಾವಕನ ಅಷ್ಟ ಮೂಲಗುಣಗಳನ್ನು ತಿಳಿಸಿಲ್ಲ. ಬದಲಾಗಿ ಸಮ್ಯಕ್ತ್ವಸಂಪನ್ನನಾಗಲು ಶ್ರಾವಕನು ಐದು ಉದುಂಬರ ಫಲಗಳನ್ನು ಹಾಗೂ ಸಪ್ತವ್ಯಸನಗಳನ್ನೂ ತ್ಯಜಿಸಬೇಕು ಎನ್ನಲಾಗಿದೆ.

ಪಂಚುಂಬರಸಹಿಯಾಇಂ ಸತ್ತವಿ ವಿಸಣಾಇಂ ಜೋವಿವಜ್ಜೇಇ ।

ಸಮ್ಮತ್ತ ವಿಸುದ್ಧಮಈ ಸೋ ದಂಸಣಸಾವಓ ಭಣಿಓ ॥೫೭॥

ಸಪ್ತವ್ಯಸನಗಳಲ್ಲಿ ಮದ್ಯ–ಮಾಂಸ–ಮಧುಗಳೂ ಸೇರಿರುವುದರಿಂದ ಅದನ್ನು ಪೃಥಕ್ಕಾಗಿ ಹೇಳುವ ಅಗತ್ಯವಿಲ್ಲ. ಹಾಗೂ ಸಮ್ಯಕ್ತ್ವವನ್ನು ಹೊಂದಬೇಕಾದರೆ ಯಾವ ನಿಯಮಗಳನ್ನು ಹೇಳಲಾಗಿದೆಯೋ ಅವುಗಳಲ್ಲಿ ಸಪ್ತವ್ಯಸನ ತ್ಯಾಗದ ಹೇಳಿಕೆಯೂ ಇದ್ದೇ ಇದೆ. ಇಲ್ಲಿ ಶ್ರಾವಕನು ವ್ರತಿಕನಲ್ಲ ಕೇವಲ ದರ್ಶನಿಕ ಅರ್ಥಾತ್ ಆಪ್ತ–ಆಗಮ–ತತ್ವಗಳನ್ನು ನಂಬುವವನಾಗಿರುತ್ತಾನೆ. ಆದರೆ ಬಹುತೇಕ ಅನ್ಯ ಶ್ರಾವಕಾಚಾರ ಕೃತಿಗಳಲ್ಲಿ ಮ ಕಾರತ್ರಯತ್ಯಾಗ, ಐದು ಅಣುವ್ರತಗಳ ಪಾಲನೆಯನ್ನು ಶ್ರಾವಕನ ಮೂಲಗುಣ ಎಂದೇ ಹೇಳಿದೆ. ಆದರೆ ವಸುನಂದಿ ಆಚಾರ್ಯರು ಶ್ರಾವಕನ ಮೂಲಗುಣ ಎಂದು ಎಲ್ಲಿಯೂ ಸ್ಪಷ್ಟಪಡಿಸಿಲ್ಲ. ಆದರೂ ದರ್ಶನಿಕ ಶ್ರಾವಕನಾಗಬೇಕಾದರೆ ಐದು ಉದುಂಬರ ಫಲಗಳನ್ನು ಮತ್ತು ಸಪ್ತವ್ಯಸನಗಳನ್ನು ತ್ಯಜಿಸಲೇಬೇಕು ಎಂದು ಸ್ಪಷ್ಟವಾಗಿದೆ. ಇವುಗಳಜೊತೆಗೆ ಮಕರತ್ರಯಗಳೂ ಸೇರಿರುತ್ತವೆ. ಇವೆಲ್ಲವೂ ಶ್ರಾವಕನಾಗಲು ಮೂಲ ಅಗತ್ಯತೆ ಎಂಬುದನ್ನು ಆಚಾರ್ಯರು ಪರೋಕ್ಷವಾಗಿ ಹೇಳಿದ್ದಾರೆ. ಇಷ್ಟು ಮಾತ್ರವಲ್ಲ ಸಮ್ಯಕ್ತ್ವಕ್ಕೆ ಎಂಟು ಅಂಗಗಳನ್ನು ಹೇಳಿ ಸಮ್ಯಕ್ತ್ವವಂತನಲ್ಲಿ ಸಂವೇಗ, ನಿರ್ವೇಗ, ನಿಂದೆ, ಗರಹೆ, ಉಪಶಮ, ಭಕ್ತಿ, ವಾತ್ಸಲ್ಯ, ಅನುಕಂಪೆ (ಗಾ–೪೯) ಎಂಬೀ ಗುಣಗಳಿರಬೇಕು ಎಂದು ಸ್ಪಷ್ಟಪಡೆಸಿದ್ದಾರೆ. ಹೀಗೆ ಕೃತಿಯಲ್ಲಿ ಸಮ್ಯಕ್ತ್ವಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿದೆ ಮತ್ತು ದರ್ಶನ

ಪ್ರತಿಮೆ ಒಂದನ್ನೇ ೨೦೬ ಗಾಹೆಗಳಲ್ಲಿ ವಿವರಿಸಲಾಗಿದೆ. ವ್ರತಪ್ರತಿಮೆಯನ್ನು ಸುಮಾರು ೬೫ ಗಾಹೆಗಳಲ್ಲಿ ವಿವರಿಸಲಾಗಿದೆ. ಇಲ್ಲಿಯೂ ಕೆಲವೊಂದು ವಿಶೇಷತೆಗಳು ಕಂಡುಬರುತ್ತವೆ. ಹಿಂಸಾವಿರತಿ ಎಂಬುದನ್ನು ಪಾಣಾಇವಾಯವಿರಈ ಎಂದೂ ಅಪರಿಗ್ರಹವ್ರತ ವನ್ನು ಇಚ್ಛಾಪಿ ಗಂಥಪರಿಮಾಣ ಎಂದಿದೆ. ದಿಕ್‌ವ್ರತ ವನ್ನೂ ದಿಸಿ–ವಿದಿಸಿ ಎಂದೂ ಭೋಗೋಪಭೋಗಪರಿಮಾಣ ಎಂಬುದನ್ನು ಭೋಗ–ವಿರತಿ ಹಾಗೂ ಉಪಭೋಗನಿವೃತ್ತಿ ಎಂದು ಪೃಥಕ್ಕರಿಸಿ ಹೇಳಿದೆ. ಇಲ್ಲಿ ಶಿಕ್ಷಾವ್ರತದಲ್ಲಿ ಸಾಮೂಹಿಕ – ಪ್ರೋಷಧೋಪವಾಸ ಗಳನ್ನು ಹೇಳಿಲ್ಲ. ಬದಲಾಗಿ, ಭೋಗವಿರತಿ, ಪರಿಭೋಗವಿರತಿ , ಅತಿಥಿ ಸಂವಿಭಾಗ ಮತ್ತು ಸಲ್ಲೇಖನಾ ಎಂದಿದೆ.

ಅಂತಿಮವಾಗಿ ವ್ರತಪ್ರತಿಮೆಯಲ್ಲಿ ಶಿಕ್ಷಾವ್ರತದ ಭೇದವಾಗಿ ಸಲ್ಲೇಖನಾವನ್ನು ಹೇಳಿದೆ. ಒಂದು ದೃಷ್ಟಿಯಿಂದ ಈ ನಿರೂಪಣೆಯು ಸಮಂಜಸವೆನಿಸುತ್ತದೆ. ಏಕೆಂದರೆ ಶ್ರಾವಕನ ಹನ್ನೊಂದು ಪ್ರತಿಮೆಗಳಲ್ಲಿ ಪ್ರತ್ಯೇಕ ರೂಪದಲ್ಲಿ ಸಾಮೂಹಿಕ ಮತ್ತು ಪ್ರೋಷಧೋಪವಾಸ ಎಂಬ ಶ್ರಾವಕ ಪ್ರತಿಮೆಗಳೇ ಇರುವುದರಿಂದ ಅವುಗಳನ್ನು ಪುನಃ ಶ್ರಾವಕ ಪ್ರತಿಮೆಯಲ್ಲಿ ಸಂಯೋಜಿಸುವ ಅಗತ್ಯವಿಲ್ಲ ಎಂಬುದು ಸ್ಪಷ್ಟವಿಚಾರ. ಆದರೆ ಅನ್ಯತ್ರ ಶಿಕ್ಷಾವ್ರತದಲ್ಲಿ ದೇಶಾವಕಾಶಿಕ, ಸಾಮಾಯಿಕ, ಪ್ರೋಷಧೋಪವಾಸ, ವೈಯಾವೃತ್ಯಗಳನ್ನು ಹೇಳಿ ಸಲ್ಲೇಖನವನ್ನು ಪೃಥಕ್ಕರಿಸಿ ಹೇಳಿದೆ. ಮುಂದೆ ಒಂದೊಂದು ಪ್ರತಿಮೆಗಳನ್ನು ಪೃಥಕ್ಕಾಗಿ ವಿವರಿಸಲಾಗಿದೆ. ಕೃತಿಯಲ್ಲಿ ಪ್ರೋಷಧೋಪವಾಸ ಹಾಗೂ ಸಾಮಾಯಿಕ ಉದ್ದಿಷ್ಟತ್ಯಾಗ ಪ್ರತಿಮೆಗಳನ್ನು ವಿಶೇಷವಾಗಿ ವಿವರಿಸಲಾಗಿದೆ. ಉಳಿದ ಪ್ರತಿಮೆಗಳನ್ನು ಸಂಕ್ಷೇಪವಾಗಿ ವಿವರಿಸಿದೆ.

ಕೃತಿಯಲ್ಲಿ ರಾತ್ರಿಭೋಜನದೋಷವನ್ನು ಮತ್ತು ಅನ್ಯಕರ್ತವ್ಯಗಳನ್ನು ಪ್ರತ್ಯೇಕವಾಗಿ ವಿವರಿಸಿದೆ. ಶ್ರಾವಕನ ಇತರ ಕರ್ತವ್ಯಗಳನ್ನು ಹೇಳಿರುವ ಕ್ರಮ ವಿಭಿನ್ನವಿದೆ.

ವಿಣಓ ವಿಜ್ಜಾವಿಚ್ಚಂ ಕಾಯಕಿಲೇಸೋಯ ಪುಜ್ಜಣ ವಿಹಾಣಂ ।
ಸತ್ತೀಏ ಜಹಜೋಗ್ಗಂ ಕಾಯವ್ವಂ ದೇಸವಿರಏಹಿಂ ॥೩೧೯॥

ದೇಶವಿರತಿಗಳಾದವರು ತಮ್ಮ ಶಕ್ತ್ಯಯನುಸಾರವಾಗಿ ವಿನಯ, ವೈಯಾವೃತ್ಯ, ಕಾಯಕ್ಲೇಶ, ಪೂಜನವಿಧಾನ ಎಂಬ ನಾಲ್ಕು ಕರ್ತವ್ಯಗಳನ್ನು ಮಾಡಬೇಕು.

ಇಲ್ಲಿ ಹೇಳಿರುವ ಶ್ರಾವಕರ ಕರ್ತವ್ಯ ಹಾಗೂ ಶ್ರಾವಕಾಚಾರದ ಅನ್ಯಕೃತಿಗಳಲ್ಲಿ ಹೇಳಿರುವ ಶ್ರಾವಕರ ಕರ್ತವ್ಯಗಳಲ್ಲಿ ಬಹಳ ಅಂತರ ಕಂಡುಬರುತ್ತದೆ. ದೇವಪೂಜೆ, ಗುರೂಪಾಸನೆ, ಸ್ವಾಧ್ಯಾಯ, ಸಂಯಮ, ತಪ, ದಾನ ಇವು ಆರು ಶ್ರಾವಕರ ಕರ್ತವ್ಯ ಎಂದು ಇತರ ಶ್ರಾವಕಾಚಾರ ಕೃತಿಗಳಲ್ಲಿ ಹೇಳಿದೆ. ಇಲ್ಲಿ ಹೇಳಿರುವ ವಿನಯ–ವೈಯಾ ವೃತ್ಯಗಳಲ್ಲೇ ದೇವ ಪೂಜೆ, ಗುರೂಪಾಸನೆ, ಸಂಯಮಾದಿಗಳು ಸಮಾವೇಶಗೊಳ್ಳುತ್ತವೆಯಾದ್ದರಿಂದ ಆಚಾರ್ಯ ವಸುನಂದಿಯವರ ಕೃತಿಯಲ್ಲಿ ಈ ನಾಲ್ಕು ಕರ್ತವ್ಯಗಳ ವಿಶಿಷ್ಟ ವರ್ಣನೆ ಇದೆ. ಪೂಜಾವಿಧಾನ ಪ್ರತಿಮೆ, ಪ್ರತಿಷ್ಠಾವಿಧಾನ, ದ್ರವ್ಯ, ಕ್ಷೇತ್ರ, ಕಾಲ ಭಾವ ರೂಪದ ಪೂಜನ ವಿಧಾನಗಳನ್ನು ವಿಸ್ತಾರವಾಗಿ ಹೇಳಿದೆ. ಅಂತಿಮವಾಗಿ ಪೂಜಾದಿಗಳ ಫಲಗಳನ್ನು ಹೇಳಿ, ತಮ್ಮ ಗುರು ಪರಂಪರೆಯನ್ನು ಆಚಾರ್ಯ ವಸುನಂದಿಯವರು ತಿಳಿಸಿದ್ದಾರೆ.

## ಬಸದಿಗಳು: ಆರ್ಥಿಕ ವ್ಯವಸ್ಥೆ

ಡಾ. ಕಮಲಾ ಹಂಪನಾ

ಮೂಲಭೂತವಾಗಿ ದೇವಾಲಯಗಳು, ಅವು ಯಾವುದೇ ಧರ್ಮಕ್ಕೆ ಸೇರಿರಲಿ, ಪ್ರಬಲ ಹಾಗೂ ಪ್ರಭಾವೀ ಕೇಂದ್ರಗಳು. ಈ ಮಾತು ಪ್ರಾ ಚೀನ ಕಾಲಕ್ಕೆ ಹೆಗೋ ಹಾಗೆ ಆಧುನಿಕ ಯುಗಕ್ಕೂ ಸಲ್ಲುತ್ತದೆ. ದೇವಾಲಯ ಬಯಿಸಿದಂತೆ, ಅದರ ಹಣಕಾಸು ವಹಿವಾಟು ಗಟ್ಟಿಯಾದ ಹಾಗೆಲ್ಲಾ, ಅದೊಂದು ಸ್ವಾಯತ್ತ ಸಂಸ್ಥೆಯಾಗುತ್ತದೆ. ಅವುಗಳಿಗೆ ಅಂಟಿಕೊಂಡು ಗುರುಮಠಗಳೂ ಹುಟ್ಟುತ್ತವೆ. ಅವು ಆರ್ಥಿಕವಾಗಿ ಬಲಿಷ್ಠವಾದಂತೆಲ್ಲಾ ರಾಜಕೀಯ ಆಗುಹೋಗುಗಳನ್ನು ನಿಯಂತ್ರಿಸುವ ದೂರ ನಿಯಂತ್ರಕಗಳ ಆಗುತ್ತವೆ. ಇಟಲಿ ದೇಶದ ರೋಮ ಮಹಾನಗರ ವಲಯದಲ್ಲಿ ಇರುವ ವೆಟಿಕನ್ ಎಂಬುದು ತನಗೆ ತಾನೆ ಸರ್ವತಂತ್ರ ಸ್ವತಂತ್ರವಾಗಿರುವ ಧಾರ್ಮಿಕ ಕೇಂದ್ರ , ಅದಿಂದು ಜಗತ್ತಿನ ನರನಾಡಿಗಳನ್ನು ನಿಯಂತ್ರಿಸುವ ಬಲಿಷ್ಠ ನೆಲೆ. ಭಾರತದಲ್ಲೂ ಕರ್ನಾಟಕದಲ್ಲೂ ಕೆಲವು ದೇವಾಲಯಗಳೂ ಮಠಗಳೂ ಸಾಮಾಜಿಕ ಸಾಂಸ್ಕೃತಿಕ ಧಾರ್ಮಿಕ

ಪ್ರಮುಖ ನೆಲೆಗಳು. ಅವುಗಳ ವಹಿವಾಟು ಕೋಟಿಗಟ್ಟಲೆಯಲ್ಲಿರುವುದೂ ರಾಜಕೀಯ ರಂಗದ ಮೇಲೆ ಹಿಡಿತವನ್ನು ಹೊಂದಿರುವುದೂ ಗಮನಾರ್ಹ. ಈ ಹಿನ್ನೆಲೆಯಲ್ಲಿ ಬಸದಿಗಳ ಆರ್ಥಿಕ ವ್ಯವಸ್ಥೆಯ ಒಂದು ಪಕ್ಷಿನೋಟ ಪ್ರಸ್ತುತ ಪ್ರಬಂಧ.

ಎರಡು ಆಧುನಿಕ ಶೈಕ್ಷಣಿಕ ಮತ್ತು ಸಾಂಸ್ಥಿಕ ಧೋರಣೆಗಳನ್ನು ದೃಷಾಂತವಾಗಿಸಿ ಈ ಪ್ರಬಂಧವನ್ನು ಬೆಳಸುವುದು ಸೂಕ್ತವೆಂದು ತೋರುತ್ತದೆ. ಹೊಸ ಕಾಲೇಜು ಹಾಗೂ ಬೋಧನ ವಿಭಾಗಗಳನ್ನು (ಕೋರ್ಸ್‌ಸ್) ಪ್ರಾರಂಭಿಸಬೇಕಾದರೆ ಸರಕಾರದ ವಿಶ್ವವಿದ್ಯಾಲಯದ ಪೂರ್ವಾನುಮತಿಯನ್ನು ಪಡೆಯಬೇಕು. ಇತ್ತೀಚೆಗೆ ಹೀಗೆ ಪೂರ್ವಾನುಮತಿ ಕೊಡಲು ಒಂದು ಷರತ್ತು ಇರುತ್ತದೆ. ಅದೆಂದರೆ, ಆದಷ್ಟೂ ಉದ್ಯೋಗಪರ ಬೋಧನಾಂಗಗಳಾಗಿರಬೇಕೆಂದು; ಅಂದರೆ ಜಾಬ್ ಓರಿಯಂಟೆಡ್ ಕೋರ್ಸ್‌ಗಳನ್ನು ತೆಗೆಯಬೇಕೆಂಬ ಯೋಗ್ಯ ಸೂಚನೆ. ವಿದ್ಯೆ ಕಲಿತ ಮೇಲೆ ನಿರುದ್ಯೋಗ ಸಮಸ್ಯೆ ಕಾಡಬಾರದೆಂಬುದು ಇದರ ಆಶಯ.

ಸಾವಿರ ವರ್ಷಗಳ ಹಿಂದಿನಿಂದಿಲೂ ಉದ್ಯೋಗಪರ ಚಟುವಟಿಕೆಯಾಗಿದ್ದುದು ದೇವಾಲಯಗಳ ನಿರ್ಮಾಣ. ಯಾವುದೇ ಧರ್ಮದ ದೇಗುಲಗಳ ನಿರ್ಮಾಣವಾದರೂ ಅದು ನೂರಾರು ಜನರಿಗೆ ಕೆಲಸವನ್ನು ಒದಗಿಸುತ್ತದೆ; ತಾತ್ಕಾಲಿಕವಾದರೂ ಒಂದು ನಿರಂತರ ಪ್ರಕ್ರಿಯೆಯಾಗಿ ಈ ನಿರ್ಮಾಣಕಾರ್ಯ ಮುಂದುವರಿಯುತ್ತಿರುವಾಗ ಅದರ ಮುಹತ್ವ ಮನವರಿಕೆಯಾಗುತ್ತದೆ.

ಎರಡನೆಯ ದೃಷ್ಟಾಂತವಿದು:

ಜೀವ ವಿಮಾ ಇಲಾಖೆಯವರು ಪಾಲಿಸಿದಾರರಿಗೆ ಹೇಳುತ್ತದೆ ನಿಮ್ಮ ಯೋಗಕ್ಷೇಮವನ್ನು ನಾವು ನೋಡಿಕೊಳ್ಳುತ್ತೇವೆ – ಯೋಗಕ್ಷೇಮಂ ವಹಾಮ್ಯಹಂ ಎಂದು. ದೇವಾಲಯಗಳು ಭಕ್ತ ಸಮುದಾಯದ ಯೋಗಕ್ಷೇಮವನ್ನು ಭಾವುಕತೆಯ ಮಟ್ಟದಲ್ಲಿ ಕಾಪಾಡುವ ಭಂಡಾರಗಳು.

ಹೀಗೆ ಇದು ಕೇವಲ ಬಸದಿಗಳ ಪ್ರಶ್ನೆಯಷ್ಟೇ ಅಲ್ಲ. ಅವರವರ ಧರ್ಮಗಳ ದೇವಾಲಯ ನಿರ್ಮಾಣ ಪ್ರಕ್ರಿಯೆಯೂ ಇದರಲ್ಲಿ ಒಳಗೊಳ್ಳುತ್ತದೆ. ದೇವಸ್ಥಾನಗಳನ್ನು ಮಾಡಿಸುವುದು ಸಾಮೂಹಿಕ ಕೆಲಸ, ಬಹುಮುಖಿಯಾಗಿ ಸಾಗುವಂತಹುದು. ಇದರ ಸಂಬಂಧಗಳು ವ್ಯಾಪಕವಾಗಿವೆ.

ಅದರಂತೆ ಇಡೀ ಸಮಾಜವನ್ನು ತನ್ನಲ್ಲಿ ಸಮಾವೇಶಗೊಳಿಸುವ ಚಟುವಟಿಕೆಗಳು ಬಸದಿಗಳಲ್ಲೂ ಇವೆ.

ಈ ದಿಕ್ಕಿನಲ್ಲಿ ಚಿಂತನೆಗೆ ತೊಡಗಿದಾಗ ಆರಂಭದ ಹಂತದಲ್ಲಿಯೇ ನಮಗೆ ತಟ್ಟನೆ ನೆನಪಿಗೆ ಬರುವುದು ದಾನಚಿಂತಾಮಣಿ ಅತ್ತಿಮಬ್ಬೆಯ ಬೃಹದ್ ಸಾಧನೆಗಳ ಹಣ ಪ್ರಪಂಚದ ವ್ಯವಸ್ಥೆ. ಒಂದೆರಡಲ್ಲ, ನೂರಿನ್ನೂರಲ್ಲ, ೧೫೦೧ ಬಸದಿಗಳನ್ನು ಆಕೆ ಕಟ್ಟಿಸಿದಳೆಂಬುದು ಯಾವುದೇ ವ್ಯಕ್ತಿಯ ಜೀವಿತ ಕಾಲದ ಅದ್ಭುತ ಸಾಧನೆ:

ಆ ಸತಿ ಮುಮ್ಮಾಡಿಸಿದಾ
ಸಾಸಿರದಯ್ನೂರು ಬಸದಿಗಿದು ಕಳಶಮೆನ
ಲ್ಭಾಸುರಮಾಯ್ತು ಜಿನೇಂದ್ರ
ವಾಸಂ ತೂಳಗುವ ಸುವರ್ಣ ಕಳಶೋನ್ನತಿಯಿಂ ||

( ಗಾಡಥಿಟ ಏಣಜಿಟಿಛಿಜ ಏಣಾಜತಿಟಿಣಿಥಿಟಿಣಣಾ ಫಿಣಡ ಚು–ಖಿಥಿತಿಥಿ ೧.ಕಾ.೫೨, ಇ.ಉ. ೧೦೦೭)

ಈ ಅಗಾಧ ಸಾಧನೆಯು ಒಳಗೊಂಡಿರುವ ಆರ್ಥಿಕ ವ್ಯವಸ್ಥೆಯ ಆಯಾಮಗಳನ್ನು ಆಲೋಚಿಸುವ ಮೊದಲು ಇಲ್ಲಿಯೇ ಇದರೊಟ್ಟಿಗೇ ಕೂಡಿಸಿ ಹೇಳಬೇಕಾದ ಸಂಗತಿಗಳಿವೆ. ರನ್ನನು ಅಜಿತ ಪುರಾಣದಲ್ಲಿ ಹೇಳಿರುವುದು:

ಆಸನ್ನಭವ್ಯೆಯುಂ ಜಿನ
ಶಾಸನ ದೀಪಿಕೆಯುಮೆನಿಸಿ ಮಣಿಕನಕಮಯೋ
ದ್ಭಾಸಿ ಜಿನಪ್ರತಿಮೆಗಳಂ
ಸಾಸಿರದೈನೂಱನರ್ತಿಯಿಂ ಮಾಡಿಸಿದಳ್ || (೧–೫೭)
ಸ್ಫುರಿತೋದ್ಯನ್ಮಣಿ ಘಂಟೆಗಳ ಮಣಿವಿತಾನ ಶ್ರೇಣಿಗಳ ಸ್ವರ್ಣಭಾ
ಸುರ ದೀಪಂಗಳ ಮಾಲೆ ದಿವ್ಯವಸನ ಪ್ರಾರಬ್ಧ ಶುಂಭದ್ಧ್ವಜೋ

ತ್ಕರಮುದ್ಭಾಸಿತ ರತ್ನ ತೋರಣಂಗಳಂ ಮಾಡಿರ್ದುವೊಂದೊಂದು ಸಾ
ಸಿರದೈನೂರನೆಯತ್ತಿಮಬ್ಬೆಗೆಣೆಯೆಲ್ಲಿ ಕಾಲದೊಳ್ ದಾನಿಗಳ್ ॥ (೧–೫೮)

ಸಮಯಕ್ಕೆ ಪಂಚಶತವಧಿ
ಕಮಾಗೆ ಸಮೆಯಿಸಿ ಸಹಸ್ರಕೂಟ ಸಹಸ್ರಾ
ಸ್ರಮುಮಂ ಸಮೆಯಿಸಲಾರ್ಗಂ
ರಮೆಯಿಸಿದಳ್ ಸಮನೆ ದಾನ ಚಿಂತಾಮಣಿಯೊಳ್ ॥ (೧–೫೯)

ಸಾರಾಂಶವಿಷ್ಟು: ಪ್ರಸ್ತುತ ಪ್ರಬಂಧಕ್ಕೆ ಸಂಬಂಧಿಸಿದಂತೆ; ಅತ್ತಿಮಬ್ಬೆಯು ಮುತ್ತು ಚಿನ್ನಗಳಿಂದ ಕೂಡಿ ಹೊಳೆಯುವ ೧೫೦೦ ಜಿನಬಿಂಬಗಳನ್ನು ಪ್ರೀತಿಯಿಂದ ಮಾಡಿಸಿದಳು. ಬೆಳಗುವ ಮಣಿಘಂಟೆಗಳೂ ಮಣಿ ವಿತಾನ (ಮೇಲ್ಕಟ್ಟು) ಶ್ರೇಣಿಗಳೂ ಹೊಳೆಯುವ ಬಂಗಾರದ ದೀಪಮಾಲೆಗಳೂ ಪವಿತ್ರವಾದ ಬಟ್ಟೆಗಳಿಂದ ಮಾಡಿದ ಬಾವುಟಗಳಿಂದಲೂ ಎದ್ದು ಕಾಣುವ ಪ್ರಕಾಶಮಾನವಾದ ರತ್ನತೋರಣಗಳಿಂದಲೂ ಮಾಡಿದ ತಲಾ ೧೫೦೦ ಸಂಖ್ಯೆಯಲ್ಲಿ ದಾನ ಮಾಡಿದಳು. ತನ್ನ ಧರ್ಮಕ್ಕೆ ಸಾವಿರಕ್ಕೆ ಮತ್ತೆ ಐನೂರು ಹೆಚ್ಚಾಗಿಸಿ ೧೫೦೦ ಸಹಸ್ರಕೂಟವನ್ನು (ಅಸಂಖ್ಯ ಶಿಖರಗಳು ಇರುವ ಪ್ರತಿಮೆ) ಸಹಸ್ರಾರವನ್ನೂ (ಕಲ್ಪಗಳು ಇರುವ ಪ್ರತಿಮೆ) ಈ ದಾನಚಿಂತಾಮಣಿ ಮಾಡಿಸಿದಳು.

ಯಾರಿಗೂ ತಬ್ಬಿಬ್ಬಾಗಿಸಿ ಗಾಬರಿಗೊಳಿಸುವ ಈ ಸಂಖ್ಯೆಯ ಬೃಹತ್ ಪ್ರಮಾಣದ ದಾನದ ವಿಚಾರ ಹಾಗಿರಲಿ, ಈ ವ್ಯಾಪಕ ಲೆಕ್ಕದಲ್ಲಿ ವಸ್ತುಗಳನ್ನು ತಯಾರಿಸಬೇಕಾದರೆ, ಬಸದಿಗಳನ್ನು ಮಾಡಿಸಬೇಕಾದರೆ ಅದೆಷ್ಟು ಜನ ಈ ಕಾಯಕದಲ್ಲಿ ತೊಡಗಿದ್ದರೆಂಬುದು ಕುತೂಹಲಕಾರಿಯಾಗಿದೆ. ಇದೊಂದು ಬೃಹತ್ ಕೈಗಾರಿಕೆಯ ಸಗಟು ವ್ಯಾಪಾರ. ಈ ಕೆಲಸಗಳು ಸಾಮಾನ್ಯರ ಕಸುಬುಗಳಲ್ಲ. ಇವು ಕುಶಲಕರ್ಮಿಗಳ ಕುಟುಂಬಗಳು ಮಾತ್ರ ಮಾಡಬೇಕಾದ ವೃತ್ತಿ.

ಅತ್ತಿಮಬ್ಬೆ ಜೀವಿಸಿದ್ದ ಕಾಲವೂ ಇದ್ದ ಕುಟುಂಬವೂ ಯುಧ್ಧೋನ್ಮುಖ ರಾಜಸತ್ತೆಯ ಕಾಲ ಮತ್ತು ಪರಿಸರ. ಶತ್ರುಗಳ ಸವಾಲು ಎದುರಿಸಲು ರಾಜ್ಯಾದಾಯದ ಬಹುಭಾಗ ಸೈನ್ಯ ನಿರ್ವಹಣೆಗೆ

ವಿನಿಯೋಗವಾಗುವುದು ಈಗಲೂ ಅನಿವಾರ್ಯವೇ. ಯುದ್ಧಮುಖೀ ಮನಸ್ಸುಗಳನ್ನು ಸಾಂಸ್ಕೃತಿಕ ಲೋಕದೆಡೆಗೆ ಹೊರಳಿಸುವ, ಹುರಿಗೊಳಿಸುವ ಕೆಲಸವು ಒಂದು ದೊಡ್ಡಸಾಧನೆ. ಅತ್ತಿಮಬ್ಬೆ ಏಳು ಪವಾಡಗಳನ್ನು ಎಸಗಿದಳೆಂದು ಗೊತ್ತಿದೆ. ಆದರೆ ಕೋಟ್ಯಾಂತರ ರೂಪಾಯಿ ಮೌಲ್ಯದ ಈ ದಾನಕಾರ್ಯವು ಎಂಟನೆಯ ಮಹಿಮೆ. ರಣರಂಗಕ್ಕೆ ಸಜ್ಜಾದ ಸಮುದಾಯವೊಂದು ಕಾವ್ಯನಾಟಕ ಸಂಗೀತಾದಿ ಲಲಿತಕಲೆಗಳಲ್ಲಿ, ಬಸದಿಗಳಲ್ಲಿ ಹೊತ್ತು ಕಳೆಯುವಂತೆ ಸೂಕ್ತ ವಾತಾವರಣವೊಂದನ್ನು ನಿರ್ಮಿಸಿದ್ದು, ಇರುವ ಅಗಾಧ ಆರ್ಥಿಕ ಸಂಪನ್ಮೂಲವನ್ನು ನಾಡಿನ ಕಲಾರಾಧಕ ಧಾರ್ಮಿಕ ಪ್ರವೃತ್ತಿಗಳ ಪೋಷಣೆಗೆ ವಿನಿಯೋಗಿಸಿದ್ದು ಇದು ಇಂದಿನ ಕನ್ನಡ-ಸಂಸ್ಕೃತಿ ಇಲಾಖೆಯು ನಿರ್ವಹಿಸುತ್ತಿರುವ ಕೆಲಸವನ್ನು ನೆನಪಿಸುವಂತಹುದು.

ಎಲ್ಲ ಕಾಲದಲ್ಲೂ ನಿರುದ್ಯೋಗವೆಂಬುದು ರಾಷ್ಟ್ರದ ದೊಡ್ಡ ಪಿಡುಗು. ಕೆಲಸವಿಲ್ಲದ ಜನರಿಂದ ದೇಶಕ್ಕೆ ನಾನಾ ಅಪಾಯಗಳು. ಕುಶಲಕಲಾವಿದರು, ಲೇಖಕರು, ಸಂಗೀತಗಾರರು, ಶಿಲ್ಪಿಗಳು ಅಥವಾ ಇನ್ನಾವುದೇ ಕ್ಷೇತ್ರದ ತಜ್ಞರು ಸಕಾಲಿಕ ಪ್ರೋತ್ಸಾಹವಿಲ್ಲದೆ ಸೊರಗಿದರೆ, ಕೊರಗಿದರೆ ಆ ನಷ್ಟ ಸಾಂಸ್ಕೃತಿಕ ಕ್ಷೇತ್ರದ ದುರಂತ. ಅದರಿಂದಲೇ ಹಿಂದಿನಿಂದಲೂ ಇವರನ್ನು ಸ್ವಸ್ಥಸಮಾಜಕ್ಕಾಗಿ ಪೋಷಿಸುವ ಪ್ರಯತ್ನಗಳು ನಡೆದಿರುವುದು ಮತ್ತು ಬಸದಿಗಳಿಗೆ ದಾನದತ್ತಿಯನ್ನೂ ನೀಡುತ್ತ ಬಂದಿರುವುದು ಈ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದರೆ ಇದರ ಸಾರ್ಥಕತೆ, ವಿವೇಕ ತಿಳಿದು ಬರುತ್ತದೆ. ದಾನ ಶುದ್ಧಿ ಹಾಗೂ ಉಭಯದಾನ ಸಿದ್ಧಿ ಎಂದು ದ್ವಿಮುಖಿಯಾಗಿ ನೋಡುವುದರಿಂದ ಇದರ ಆಯಾಮ ತಿಳಿಯುತ್ತದೆ. ವ್ಯಕ್ತಿಗಳಿಗೆ ಉಚಿತವಾಗಿ ದಾನಕೊಡುವುದಕ್ಕಿಂತಲೂ ಕಾಯಕ ಮಾಡಿಸಿ ಸಂಭಾವನೆ ಕೊಡುವುದು ಯೋಗ್ಯವಿಧಾನ ಜನರಿಗೂ ತಮ್ಮ ಪರಿಶ್ರಮಕ್ಕೆ ತಕ್ಕ ಪುರಸ್ಕಾರ ಪಡೆದ ತೃಪ್ತಿ. ಯಾರಿಗೆ ಯಾವುದರಲ್ಲಿ ನೈಪುಣ್ಯ ಇರುತ್ತದೆಯೋ ಅವರನ್ನು ಅದರಲ್ಲಿಯೇ ತೊಡಗಿಸುವುದರಲ್ಲಿ ದೂರಗಾಮಿ ವಿವೇಕ ವಿದೆ. ದೇವರ-ಧರ್ಮದ ಕೆಲಸವೂ ಆಯಿತು, ಸೂಕ್ತ ಸಂಭಾವನೆಯ ಸಂದಾಯವೂ ಆಯಿತು, ಕಲೆಯೊ ಅಚ್ಯುತವಾಗಿ ಉಳಿಯಿತು. ಲೌಕಿಕವೂ ಸಾಧಿತವಾಗಿ ಆಗಮವೂ ಸಾಧ್ಯವಾಗಿ ಏಕಕಾಲದಲ್ಲಿ ಎರಡೂ ಕೆಲಸ ಒಟ್ಟಿಗೆ ನೆರವೇರಿದ ಸಂತೃಪ್ತಿಯಿದರಲ್ಲಿದೆ. ಇಂತಹ ದೂರದೃಷ್ಟಿಯಿಂದ ಬಸದಿಗಳನ್ನು

ಕಟ್ಟಿರುವ ಧಾರ್ಮಿಕ–ಸಾಂಸ್ಕೃತಿಕ ಚಳವಳಿಯನ್ನು ಪರಾಮರ್ಶಿಸಬೇಕು. ಆರ್ಥಿಕ ಒಡೆತನವನ್ನು ಸಮರ್ಥಿಸಿಕೊಳ್ಳುವುದಕ್ಕೂ ಸಾರ್ಥಕಪಡಿಸಿಕೊಳ್ಳುವುದಕ್ಕೂ ಶ್ರೀಮಂತ ವರ್ಗ ದಾರ್ಮಿಕ ಕೇಂದ್ರಗಳಿಗೆ ಲಗ್ಗೆ ಹಾಕುತ್ತದೆ. ರಾಜಕೀಯ ಮೇಲಾಳಿಕೆಯನ್ನು ಸುಭದ್ರಗೊಳಿಸಲು ಆಡಳಿತಾಂಗವು ಮಠಮಂದಿರಗಳಿಗೆ ಮುಗಿಬೀಳುತ್ತದೆ. ಅದರಂತೆಯೇ ದಾರ್ಮಿಕ ಕೇಂದ್ರಗಳಿಗೂ ಶ್ರೀಮಂತರ ಮತ್ತು ಸರಕಾರದ ಸಹಕಾರ ದಾಹವಿರುತ್ತದೆ. ಸಹಜವಾಗಿಯೇ ಪರಸ್ಪರ ಓಲೈಸುವುದು ಅಬಾಧಿತವಾಗಿ ಮುನ್ನಡೆಯುತ್ತದೆ. ಆಪ ಥಿಞಪದಶಿಟಣಟ ಣಣಣೆಡಿಞಭಿತಿ ಥಾಂಣಣತಿಥಿ, ಥಿಟಭಿಞ (ಆಭಿಟಣಾ)ಟಭಿಜಿ ಭಿಡಿಣಣಟ ಥಿಟಭಿತಿ ಇಣಡಞಾನಞಶಿಥ ಥಿಟಭ ಡಿಣಥಾ ಟಿಡಿಣಣತಿಥಿಭಿಣಾ ಥಿಞಪಥಿಟಣಣ ಣಇ ಥಿಟಭ ಡಿಟಿಜಿಜಿಡಞ ಜಡಞಭಿಥಾ ಥಿಟಭ ಫಿಟಿತಿಭಿ–ಆಭಿಣಭಿಥಟಿಞಭಿಥ ಭಿಣಾಜಿ ಥಿಟಭ ಜಣಡಿಡಿಭಿಶಿಜಟಿಭಿಡ ಜಡಞಭಿಥಾ ನಟಣಥಞ ಇಟಿಣಭಿಣಾಜಟಿಭಿಡ ಟಭಞಾ ನಞಾಥಿ ಭಿ ಡಾಣಟ ನಭಿಪ ಟಿಣ ಥಿಟಭ ಜಭಿದಾಞ ಣಇ ಐಭಿಟಿಣಟಿಥಾ. ಏಥಿ ಭಾಞಭಿಜಾಞಜಿ ಥಿಟಭಾ ಥಿಣ ಜಣಣಾಥಿತಿದಾಪಥಿ ಡಿಭಿಟಾಟಿಇಟಿಜಭಾಥಿ ಆಭಿಟಿಣಭಿಡಭಿಷಭಿಥ ಭಿಣಾಜಿ ಟಿಡಿಭಿಟಿಞಾ [ಣೆಡಾಭಿಡಾಭಿತಿ: ಗಿಟಭ ಎಟಿಥಾಣತಿಪ ಭಿಣಾಜಿ ಜಡಾಥಿದಶಿಭ ಣಇ ಟಿಣ ಜಿಭಿಟಿಣ ಣಿಭಾಣಿಡಞ ಫಿಣಡ ಏಫಿ ಅಟಞ ಣಇ ಏಡಿಣಭಿಶಿಟಿಭಿಡ ಒಭಿಣಾಭಿಥಟಿ: ಖ ೨೮೯]. ಅಯ್ಯಾವೊಳೆ ಅಯ್ನೂರ್ವರು,ನಕರರು, ಪಟ್ಟಣ ಸೆಟ್ಟಿಗರು ಹಾಗೂ ಇತರ ವರ್ತಕರು ತಮ್ಮ ಆದಾಯದ ಭಾಗಗಳನ್ನು ಬಸದಿಗಳಿಗೆ ಬಿಟ್ಟುಕೊಡುತ್ತಿದ್ದರೆಂದು ಸಮಕಾಲೀನ ಶಾಸನ ದಾಖಲೆಗಳಿಂದ ತಿಳಿದು ಬರುತ್ತದೆ. ಗಂಡರಾದಿತ್ಯನ ಕಾಲದ ಕೊಲ್ಲಾಪುರ ಶಾಸನದಲ್ಲಿ, ಬೊಮ್ಮಿಸೆಟ್ಟಿಯೇ ಮೊದಲಾದ ಕೆಲವು ವರ್ತಕರು ತಮ್ಮತೆರಿಗೆ ಆದಾಯಗಳನ್ನು ಬಸದಿಗೆ ಬಿಟ್ಟುಕೊಟ್ಟುದರ ವಿವರಣೆ ಸಿಗುತ್ತದೆ (ಔಟಿತಿಭಿಥಟಿ, ಫಿ.ಫಿ., ಏಣಾಜತಿಟಿಣಥಿಟಿಣಣಾ ಣಇ ಥಿಟಭ ಗಟಿಡಞಭಿಟಭಿತಿಭಿಥಾ ಇಣತಿಣಡಾ ಏಣಾಜತಿಟಿಣಥಿಟಿಣಣಾಡಿ ಏಣಾಜಿಟಿಜಭಿತಿಡಾ, ಫಿಣಡ ಫಿಏ (ಅಗಏ. ೧೯೭೭) ಈ. ೪೯. ೧೧೩೬ ಇ.ಉ. ಣೆಣಿ.೨೨೯–೩೫)

ಬಸದಿಗಳಿಗೆ ಇಡೀ ಗ್ರಾಮಗಳನ್ನು, ಹೊಲ ನೆಲ ನಿವೇಶನಗಳನ್ನು, ಗಾಣತೋಟಗಳನ್ನು ಬಿಟ್ಟುಕೊಡುತ್ತಿದ್ದ ಸಂಗತಿ ಹಲವಾರು ಶಾಸನಗಳಲ್ಲಿ ಬಂದಿದೆ. ದೃಷ್ಟಾಂತವಾಗಿ ಇಲ್ಲಿ ಕೆಲವನ್ನು ಹೆಸರಿಸಿದೆ:

ರಾಷ್ಟ್ರಕೂಟ ಪ್ರಭೂತವರ್ಷ ರಾಜನ (೮೧೪–೭೮) ದಾನ ಪತ್ರದಲ್ಲಿ, ಮಾನ್ಯಪುರದ ಶಿಲಾಗ್ರಾಮದ ಜಿನಮಂದಿರದ ಉಪಯೋಗಕ್ಕಾಗಿ ಜಾಲಮಂಗಲ ಗ್ರಾಮವನ್ನು ದಾನವಾಗಿ ಬಿಟ್ಟುಕೊಡಲಾಯಿತು (ಎಕ. ಚುಏ ಗುಬ್ಬಿ ೬೧ ಕ್ರಿ.ಶ.೮೧೩)

ಅಮೋಘವರ್ಷನು ಕೊಳನೂರ ಬಸದಿಗೆ ಗ್ರಾಮವೊಂದನ್ನು ದಾನ ಮಾಡಿದನು (ಉಡಫಿಣಡಫಿಡ ಪು. ೨೫–೩೮ ಕ್ರಿ.ಶ. ೮೬೦)

ಬಂಕಾಪುರದ ಧೋರ ಜಿನಾಲಯದ ಚನ್ದ್ರಪ್ರಭ ಭಟಾರರ್ ಪಸುಣ್ಡಿಯಂ ಅಭ್ಯನ್ತರ ಸಿದ್ಧಿಯಾಳುತ್ತಿರೆ ನಾಗಪುಲಿಗಾವುಣ್ಡಂ ಗಾವುಣ್ಡನ ಕೆಯ್ಯೊಱಂ ಪನ್ನಿರ್ಮ್ಮತ್ತರ್ಕ್ಕೆಯ್ಯಂ ಮಾಱಿಗೊಣ್ಡು ಬಿಟ್ಟಂ (ಗಡಾ ಚಾ–ಏ ಕಾ. ೩೪. ಕ್ರಿ.ಶ. ೯೨೫. ಅಸುಂಡಿ. ಪು. ೨೦)

ಬಾದಾಮಿ ಚಾಳುಕ್ಯರ ವಿನಯಾದಿತ್ಯನು ಪುಲಿಗೆಱೆಯ ಶಂಖಜಿನಾಲಯಕ್ಕೆ ಬೆಳ್ವೊಲ ಮೂನೂಱಿರ ಹಡಗಿಲೆ ಗ್ರಾಮವನ್ನು ದಾನವಿತ್ತನು (ಗಡಾಚಿ ಕ ೪.೬೮೩ ಇ.ಉ.) ಇದೇ ಶಂಖಜಿನಾಲಯಕ್ಕೆ ಸೆಂಬೊಳಲ ಗ್ರಾಮವನ್ನು (ಅದೇ ಕಾ. ೫. ೭೨೩ ಇ.ಉ.) ಮುತ್ತು ಕದ್ದಮ ಗ್ರಾಮವನ್ನು ದಾನವನ್ನು ದಾನಕೊಡಲಾಗಿದೆ (ಅದೇ, ಕಾ. ೬.೭೩೦ ಇ.ಉ.)

ಇಂತಹ ನೂರಾರು ಉದ್ಧೃತಗಳಿಂದ ನಮಗೆ ಗೊತ್ತಾಗುವಂತೆ ಬಸದಿಗಳಿಗೆ ಭತ್ತ ಎಣ್ಣೆ ತೋಟ ಗಾಣ ಅಡಿಕೆ ಮರ ಹೂತೋಟ ಹಸುಗಳು ಬಟ್ಟೆಗಳು ಚಿನ್ನ ಬೆಳ್ಳಿ ನವರತ್ನಗಳು ಮುಂತಾದ ಅನೇಕಾನೇಕ ಕೊಡುಗೆಗಳು ದಾನ ಧರ್ಮ ದತ್ತಿ ರೂಪದಿಂದ ಬಂದು ಸೇರುತ್ತಿದ್ದುವು. ಇವಲ್ಲದೆ ನಗದು ರೂಪದಲ್ಲಿಯೂ ಪೊನ್–ಹೊನ್ನು, ಹಣ, ಗದ್ಯಾಣ, ದೀನಾರ–ದ್ರಮ್ಮ, ಹಾಗ – ಇವೂ ಬರುತ್ತಿದ್ದವು. ಅವೆಲ್ಲದರ ಲೆಕ್ಕ ಮತ್ತು ಆಡಳಿತ ನಿರ್ವಹಣೆ ದೇವಾಲಯದ ಒಂದು ಹೊಣೆಗಾರಿಕೆ ಆಗಿತ್ತು. ಜೈನಗುರುಗಳಲ್ಲಿ ಕೆಲವರು ಮಹಾಮಂಡಲಾಚಾರ್ಯರೂ ಇರುತ್ತಿದ್ದರು. ಅಲ್ಲದೆ ಆಯಾ ಬಸದಿಗಳಿಗೆ ಸಂಬಂಧಿಸಿದ ಆಚಾರ್ಯರೂ ಇರುತ್ತಿದ್ದರು. ಉದಾಹರಣೆಗೆ –

ಆ ಬಂದಣಿಕಾ ತೀರ್ತ್ಥಾದಿ ಸರಳ ಚೈತ್ಯಾಲಯಕ್ಕಾಚಾರ್ಯ್ಯರುಂ ಮಂಡಳಾ ಚಾರ್ಯ್ಯರುಮೆನಿಸಿದ ಪದ್ಮನನ್ದಿ ಸಿದ್ಧಾಂತದೇವ (ಎಕ. ಛಿಡಾ (೧೯೦೨) ಸೊರಬ. ೨೬೨.೧೦೭೭ ಕುಪ್ಪಟೂರು (ಶಿವಮೊಗ್ಗ ಜಿ)

ಶ್ರೀ ಮನ್ಮಂಡಳಾಚಾರ್ಯಪ್ರಭಾಚಂದ್ರ ಸಿದ್ಧಾಂತ ದೇವರ್ (ಎಕ.ಡಚ(ಖಿ) ೧೭೫ (೧೪೨) ಕ್ರಿ.ಶ.೧೧೩೯)

ಶ್ರೀಮದಿಂಗಳೇಶ್ವರ ತೀರ್ತ್ಥದ ಬಸದಿಯಾಚಾರ್ಯರು ದೇವ ಚಂದ್ರಭಟ್ಟಾರಕ ದೇವರು (ಗಡಾ ಚಖು ೫೯೮. ೧೨೩. ತಮ್ಮಧಡ್ಡಿ (ಬಿಜಾಪುರಜಿ/ಮುದ್ದೇಬಿಹಾಳ ತಾ))

ವರಶಂಖಜಿನಾಳಯಾಧಿಪತಿ ಕಮಳದೇವಾಚಾರ್ಯ೦ (ಡ್ದೇ, ನಂ. ೧೨೮. ಕ್ರಿ.ಶ. ೧೧೨೪ ಚಿಕ್ಕಹಂದಿಗೋಳ (ಗದಗ ಜಿ/ತಾ))

ಶ್ರೀ ರಾಜನೃಪಾಳ ಸುಪ್ರತಿಷ್ಠಿತ ಶಾಂತಿನಾಥ ದೇವರ ಬಸದಿಯಾಚಾರ್ಯರುಂ ಮಂಡಲಾಚಾರ್ಯರು ಮಂಡಳಾಚಾರ್ಯರುಮಪ್ಪ ಶುಭಚಂದ್ರ ಭಟ್ಟಾರಕ ದೇವ (ಐಆಆಖಿಅಗ ಚ-ಚಚಚ (೧೮೭೪) :ಕಾ.ಛಿ. ಕ್ರಿ.ಶ.೧೨೦೪ ಸೌಂದತ್ತಿ (ಬೆಳಗಾವಿ ಜಿ) ಪು. ೨೨೫ ಸಾಲುಳ್ ೫೩)

ಶ್ರೀಮದ್ರಾಯ ರಾಜಗುರು ಮಂಡಲಾಚಾರ್ಯ ಮಹಾವಾದವಾದೀಶ್ವರ ರಾಯವಾದಿ ಪಿತಾಮಹ ಸಕಲ ವಿದ್ವಜ್ಜನ ಚಕ್ರವರ್ತ್ತಿಗಳಪ್ಪ ಶ್ರೀಮದಭಯ ಚಂದ್ರ ಸಿದ್ಧಾಂತ ದೇವ (ಉಇ.ಛಿಡಚ(೧೯೦೨) ಸೊರಬ. ೩೨೯. ಕ್ರಿ.ಶ. ೧೪೬೫ ಪು.೧೫೪)

ಅತ್ಯಂತ ಪ್ರಖ್ಯಾತರಾದ ದೀರ್ಘಾಯು ಮಂಡಲಾಚಾರ್ಯರೆಂದರೆ ಭಾನು ಕೀರ್ತಿಸಿದ್ಧಾಂತಿ ದೇವರು ಉಇ.ಛಿಡಚಾ-ಟಿಟಿ ಸೊರಬ. ೨೩೩ ಕ್ರಿ.ಶ. ೧೧೩೯,ಅದೇ,ಸೊರಬ. ೩೪೫ ಕ್ರಿ.ಶ. ೧೧೨೧, ಅದೇ, ಸಾಗರ ೧೪೦ ಕ್ರಿ.ಶ. ೧೧೯೮- ಇತ್ಯಾದಿ)

ಇವರುಗಳಲ್ಲಿ ನಿರ್ದಿಷ್ಟ ಬಸದಿಯ ಒಡೆತನವಿದ್ದ ನಿರ್ದಿಷ್ಟ ಆಚಾರ್ಯರು ಅಲ್ಲಿಯ ಆರ್ಥಿಕ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ಮಹಾಮಾಂಡಲಿಕನೊಬ್ಬನ ಆಡಳಿತ ವ್ಯಾಪ್ತಿಗೆ ಸೇರಿದಂತೆ ಇರುವ ಭಾಗದಲ್ಲಿ ಜೈನ ಸಮಾಜ ಮತ್ತು ಬಸದಿಗಳ ಮೇಲ್ವಿಚಾರಣೆಯನ್ನು ಆತ್ಯಂತಿಕವಾಗಿ ನಿಯಂತ್ರಿಸುವ ಮಂಡಲಾಚಾರ್ಯರೆನಿಸಿದ ಹಿರಿಯರು ಇರುತ್ತಿದ್ದರು. ಶ್ರೀ ಕೊಂಡಕುನ್ದಾನ್ವಯ್

ದೇಸಿಯಗಣ ಪುಸ್ತಕಗಚ್ಛದ ಶ್ರೀ ದಿವಾಕರಣನ್ದಿ ಸಿದ್ಧಾನ್ತ ದೇವರ ಜೇಷ್ಠಗುರುಗಳಪ್ಪ ದಾಮನನ್ದಿ ಭಟ್ಟಾರಕರ ಸಂಬಂಧಿ ಈ ಪನಸೋಗೆಯ ಚಂಗಾಳ್ವ ತೀರ್ತ್ಥದೆಲ್ಲಾ ಬಸದಿಗಳುಂಮಬ್ಬೆಯ ಬಸದಿಯುಂ ತೊಱ ನಾಡರ್ಬೆಳಿವಣೆಯ ಬಸದಿಯುಂ ತತ್ಸಮುದಾಯ ಮುಖ್ಯಂ [ ಉ.ಕ. ಫ ( ಖ ) ಕೃಷ್ಣರಾಜನಗರ ೨೬ (ಏಫ ಯೆ ೨೭) ಚಿಕ್ಕಹನಸೋಗೆ. ಕ್ರಿ.ಶ. ೧೧-೧೨- ಶ. ಪು. ೧೭]. ಇಂತಹ ಪ್ರಮುಖರಆಡಳಿತ ವ್ಯಾಪ್ತಿಗೆ ಹಲವು ಬಸದಿಗಳ ಆರ್ಥಿಕ ವ್ಯವಸ್ಥೆಯೂ ಒಳಪಡುತ್ತಿತ್ತು.ಸ್ತ್ರೀಯರಾದ ಸನ್ಯಾಸಿನಿಯರಿಗೂ ಬಸದಿಗೆ ಕೊಡುವ ದಾನಗಳನ್ನು ಒಪ್ಪಿಸುತ್ತಿದ್ದರು;ಮೈಳಾಪಾನ್ವಯಕಾರೇಯ ಗಣದ ಗುಡ್ಡ ಕೇಮಣ, ರೇಚಣ ಇವರು ಜಿರ್ನ್ಣೋದ್ಧಾರಂ ಮಾಡಿಸಿದ ಬಸದಿ ೬ಅಂದ್ರನಾಥಸ್ವಾಮಿಗಳ ಅಷ್ಟವಿಧಾರ್ಚನೆಗೆ, ರಿಷಿಯರ ಅಜ್ಜಿಯ ಆಹಾರ ದಾನಕ್ಕೆ, ಆ ಸ್ಥಳದ ಅರವತ್ತೊಕ್ಕಲು ಸಾಸಿರ್ವ್ವರುಂ ಶ್ರೀ ರಾಜಧಾನಿ ನರೇಂದ್ರರ ಕುಳಿಯ ಬಸದಿಯಾಚಾರ್ಯ ಬಾಹುಬಲಿ ದೇವರ ಶಿಷ್ಯತಿ ರಾಜಮತಿ ಕನ್ತಿಯರ ಕಾಲಂ ಕರ್ಚಿ ಆಚಂದ್ರಾರ್ಕ್ಕತಾರಂಬರಂ ಧಾರಾಪೂರ್ವ್ವಕಮಾಗೆ ಬಿಟ್ಟರು (ಧಾರವಾಡ ತಾಲೂಕು ಶಾಸನಗಳು, ಸಂಖ್ಯೆ ೪೫. ೧೨ ಶ. ನುಗ್ಗಿಕೇರಿ. ಪು. ೮೩).

ಈ ರೀತಿಯಲ್ಲಿ ರಾಜ- ರಾಣಿಯರೂ ಪ್ರಧಾನಿ-ಮಂತ್ರಿ-ಮಹಾ ಮಾಂಡಲಿಕ- ಮಹಾ ಸಾಮಂತರೂ ಹೆಗ್ಗಡೆ ನಾಳ್ಗಾಮುಂಡ ಗಾಮುಂಡಿ ಮನ್ನೆಯರೂ ನೀಡಿದ ದಾನ ದತ್ತಿಗಳಿಂದ ಬರುವ ನಿರಂತರ ಆದಾಯವನ್ನು ಸಂಗ್ರಹಿಸುವುದು, ವಿತರಿಸುವುದು – ಇವು ಆರ್ಥಿಕ ವ್ಯವಸ್ಥೆಗೆ ಸೇರಿದ ಕೆಲಸ. ಈ ಆದಾಯವನ್ನು ನಾಲ್ಕು ಪ್ರಧಾನ ಬಾಬುತ್ತುಗಳಿಗೆ ವಿನಿಯೋಗಿಸಲಾಗುತ್ತಿತ್ತು.

ಧರ್ಮವಿಹಾರ ಹೊರಟ ಜಿನಮುನಿಗಳು ಅಲ್ಲಲ್ಲಿ ಬಸದಿಗಳಲ್ಲಿ ಉಳಿದು ಕೊಳ್ಳುತ್ತಿದ್ದರು. ಅವರು ಏಕ ವಿಹಾರಿಗಳಾಗಿರುಬಹುದು, ಮುನಿಸಂಘದೊಂದಿಗೆ ಬಂದಿರಬಹುದು, ರಿಷಿಮುನಿಗಳಿಗೇ ಅಲ್ಲದೆ ಕಂತಿಯರ ತಂಡವೂ ಆಗಿರಬಹುದು. ಅವರು ಆಯಾ ಬಸದಿಗಳಲ್ಲಿ ಇರುವಷ್ಟು ಕಾಲ ಅವರಿಗೆ ಆಹಾರ ವ್ಯವಸ್ಥೆಯಾಗಬೇಕು.

ಬಸದಿಯ ಮೂಲನಾಯಕರಿಗೂ ಜಿನಶಾಸನದೇವತೆಗಳಿಗೂ ನಿತ್ಯಪೂಜೆ, ಅರ್ಚನೆ, ಅಭಿಷೇಕಾದಿಗಳ ಏರ್ಪಾಟಾಗಬೇಕು.

ಆಗಾಗ ಬಸದಿಯ ಜೀರ್ಣೋದ್ಧಾರ ಕಾರ್ಯ ಆಗಬೇಕು. ಸುಣ್ಣ ಹಚ್ಚುವುದು, ಬಣ್ಣ ಬಳಿಯುವುದು, ಸಾರಣೆ– ಕಾರಣೆ ಮುಂತಾದ ಸಂರಕ್ಷಣೆ ಕಾರ್ಯವೂ ನಡೆಯಬೇಕು.

ಪೂಜೆಯ ಕಾರ್ಯವನ್ನು ನಿರ್ವಹಿಸುವ ಅರ್ಚಕರಿಗೆ (ಪೂಜಾರರು, ಇಂದ್ರರು, ಉಪಾಧ್ಯರು, ಪಂಡಿತರು – ಎಂಬ ಹೆಸರುಗಳೂ ಇವರಿಗೆ ಪ್ರಾದೇಶಿಕವಾಗಿ ಬಳಕೆಯಲ್ಲಿದೆ) ಪ್ರತಿ ವರ್ಷಕ್ಕೊಮ್ಮೆಯೊ ಮಾಸಕ್ಕೊಮ್ಮೆಯೊ ನಿಗದಿತ ಸಂಭಾವನೆ ಸಲ್ಲಬೇಕು.

ಈ ನಾಲ್ಕು ಬಾಬತ್ತಿನ ಆರ್ಥಿಕ ವ್ಯವಸ್ಥೆಯಲ್ಲದೆ ವರ್ಷದ ನಡುವೆ ಆಗಾಗ ಉತ್ಸವ, ತೇರು, ವಿಶೇಷಪೂಜೆ, ನೋಂಪಿಗಳು, ಉದ್ಯಾಪನೆ, ಪಂಚಕಲ್ಯಾಣ ಅಭಿಷೇಕ ಪರ್ವಗಳು ಅಷ್ಟಾಹ್ನಿಕಾದಿಗಳು ನಡೆಯುವಾಗ ಅವುಗಳ ಹಣಕಾಸು ವಹಿವಾಟಿನ ಉಸ್ತುವಾರಿಯೂ ಇರುತ್ತದೆ. ಬಸದಿಗೆ ಬಿಟ್ಟುಕೊಟ್ಟ ಹೊಲತೋಟ ತುಡಿಕೆಗಳಿಂದ ಕಾಲಕಾಲಕ್ಕೆ ಬರುವ ದವಸಧಾನ್ಯದ ವಿಲೇವಾರಿಯೂ ಆರ್ಥಿಕ ಹೊಣೆ ಹೊತ್ತ ಮಂಡಲಿಗೆ ಸೇರಿದ್ದು. ದೇವಾಲಯದಲ್ಲಿಯೇ ಇಟ್ಟ ಗೋಲಕ – ಹುಂಡಿಯಿಂದ ಬಂದ ನಗದು ರೂಪದ ಹಣವೂ ಸೇರುತ್ತಿತ್ತು. ಹೀಗೆ ಬಂದ ಆದಾಯವನ್ನು ಸಂಚಿತ ಠೇವಣಿಯಾಗಿ ಬ್ಯಾಂಕಿನಲ್ಲಿ ಇಡುವ ಹಾಗೆ ಬಸದಿಯಲ್ಲಿ ಸಂರಕ್ಷಿಸಲಾಗುತ್ತಿತ್ತು. ಬಸದಿಗಳು ಬ್ಯಾಂಕುಗಳೂ ಆಗಿ ಕಾರ್ಯ ನಿರ್ವಹಿಸುತ್ತಿದ್ದವು. ನಗದು ಹಣವನ್ನು ವರ್ತಕರಿಗೆ ಕೂಡ ಬಡ್ಡಿದರವನ್ನು ನಿಗದಿ ಪಡಿಸಿ ಸಾಲ ಕೊಡುತ್ತಿದ್ದರು. ಬಸದಿಗಳು ಹೀಗೆ ಬಡ್ಡಿ ವ್ಯವಹಾರವನ್ನು ಅಚ್ಚುಕಟ್ಟಾಗಿ ನಡೆಸುತ್ತಿದ್ದುದು ದಾಖಲಾಗಿರುವ ಒಂದು ಶಾಸನ ಭಾಗವನ್ನು ಉದಾಹರಿಸುತ್ತೇನೆ (ಸಾಇಎ. ೭೬ನಂ. ೫೫ ಕ್ರಿ.ಶ. ೧೧೮೨ ಲಕ್ಷ್ಮೇಶ್ವರ. (ಧಾಜಿ/ಶಿರಹಟ್ಟಿ ತಾ) ಪು. ೬೭–೬೯).

ಚಾಳುಕ್ಯ ತ್ರಿಭುವನ ಮಲ್ಲದೇವ ಪರ್ಮಾಡಿ ಭೂವಲ್ಲಭ ವಿಕ್ರಮಾದಿತ್ಯ ಚಕ್ರವರ್ತಿಯ (೧೦೭೬–೧೧೨೬) ತಮ್ಮನಾದ ಅಣ್ಣನಂಕಕಾಱ ಶ್ರೀಮತ ತ್ರೈಲೋಕ್ಯಮಲ್ಲ ವೀರನೊಳಂಬ – ಪಲ್ಲವ ಪೆರ್ಮಾನಡಿ ಜಯಸಿಂಹದೇವನು ಪುರಿಗೆಱೆ ಮೂನೂಱುಂ ಬೆಳ್ವಲ ಮೂನೂಱುಂ ಬನವಸಿ ಪನ್ನಿರ್ಚ್ಛಾಸಿರಮುಂ ಕನ್ನೂರ್ಸಾ ಸಿರಮುಂ ಒಳಗಾಗಿ ಕೆಲವು ಭತಗ್ರಾಮಂಗಳನಾಳುತ್ತಿದ್ದನು. ಇವನ ಆಶ್ರಯದಲ್ಲಿ ಪುರಿಕರಪುರವರ್ ಪರಮೇಶ್ವರನಾಗಿ ಉಜ್ವಲಕೀರ್ತಿಸಗರ ಮಾರ್ತ್ತಂಡ ರಾಷ್ಟ್ರಕೂಟವರನಾಗಿ ನೆಗಳ್ದ ಜದುಕೇಸಿ ನೃಪನು ಆಡಳಿತ ನಡೆಸುತ್ತಿದ್ದನು. ಈ ಅವಧಿಯಲ್ಲಿ ತಳಱ ನಾಗವರ್ಮ ವಿಭುವು ಧರ್ಮ ನಿಯಿತ್ತದೆ ಗೋಲೆ ಗೆನ್ದು (ಗೋಲೆ=ಗೋಲಕ, ಹುಂಡಿ)ಸಾಲ ಪಡೆದಿದ್ದನು ಅನಂತರ ಲಕ್ಕಣಯ್ಯ ಸೆಟ್ಟಿಯು ಅದನ್ನು ಸಾಲವಾಗಿ ಪಡೆದು ಹತ್ತು ಗದ್ಯಾಣ ಹೊಸ ಹೊನ್ನನು ಬಡ್ಡಿಯಾಗಿತ್ತುದಲ್ಲದೆ ಬಡ್ಡಿಯ ರೂಪವೆಂದು ಜನರಿಗೆ ನೀರಿನ ಅನುಕೂಲಕ್ಕಾಗಿ ಒಂದು

ಏತವನ್ನು ಮಾಡಿಸಿಕೊಟ್ಟನು.  ರೆಟ್ಟಿ ಲಕ್ಕಣಯ್ಯನ ಮಗ ಸಾಂತಿ ಸೆಟ್ಟಿಯೂ ಬಡ್ಡಿಯನ್ನು ಪುನಃ ಮುಂದುವರಿಸಿದನು: